ಕರ್ನಾಟಕ

# ಸಮಾಜವಾದಿ

ವೇದಿಕೆ

**2021**

**ಜನವರಿ– ಜೂನ್**

**ಅವಧಿಯ**

**ವರದಿ ಮತ್ತು ಲೆಕ್ಕಪತ್ರ**

**ನಿಮ್ಮ ಸಲಹೆ –ಸೂಚನೆಗಳನ್ನು ಸ್ವಾಗತಿಸುತ್ತೇವೆ.**




ಶಾಂತವೇರಿ ಗೋಪಾಲಗೌಡ

# ದೇಶದ–ಕರ್ನಾಟಕದ ಕೆಲವು ಸಮಾಜವಾದಿ ನೇತಾರರು

ಕರ್ನಾಟಕದ ಸಮಾಜವಾದಿಗಳಲ್ಲಿ ಶಾಂತವೇರಿ ಗೋಪಾಲಗೌಡ, ಜೆ.ಎಚ್. ಪಟೇಲ್, ಎಂ.ಪಿ. ಪ್ರಕಾಶ್, ಕೋಣಂದೂರು ಲಿಂಗಪ್ಪ, ಎಸ್.ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಮುಂತಾದವರು ರಾಜಕಾರಣ ಕ್ಷೇತ್ರದಲ್ಲಿ ಹಾಗೂ ರಾಷ್ಟ್ರಕವಿ ಕುವೆಂಪು, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಪ್ರೊ॥ ಚಂದ್ರಶೇಖರ ಪಾಟೀಲ ಕೆ. ರಾಮದಾಸ್, ದೇವನೂರ ಮಹಾದೇವ ಮುಂತಾದವರು ಸಾಹಿತ್ಯ–ಕಲಾ ಕ್ಷೇತ್ರಗಳಲ್ಲಿ ಸಮಾಜವಾದಿ ಆಶಯವು ಸಾಕಾರಗೊಳ್ಳಲು ಕಾರಣಕರ್ತರಾದರು.


ಜನಸಂಘಟನೆ, ಹೋರಾಟ, ಅನ್ಯಾಯದ ಖಂಡನೆ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು ಮುಖ್ಯವಾಗಿ ಪ್ರೊ॥ ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ.ಸುಂದರೇಶ್, ಪ್ರೊ॥ ಬಿ.ಕೃಷ್ಣಪ್ಪ, ಮುಂತಾದವರು.



ಮಹಾತ್ಮಾ ಗಾಂಧೀಜಿ



ಡಾ॥ ಬಿ.ಆರ್.ಅಂಬೇಡ್ಕರ್



ಆಚಾರ್ಯ ನರೇಂದ್ರ ದೇವ



ಜಯಪ್ರಕಾಶ ನಾರಾಯಣ



ರಾಮಮನೋಹರ ಲೋಹಿಯಾ



ಕಮಲಾದೇವಿ ಚಟ್ಟೋಪಾಧ್ಯಾಯ




ಯೂಸುಫ್ ಮೆಹರ್ ಆಲಿ



ಪ್ರೊ॥ ಮಧು ದಂಡವತೆ



ಜಾರ್ಜ್ ಫರ್ನಾಂಡಿಸ್



ಮಧು ಲಿಮಯೆ

# ಕರ್ನಾಟಕ ಸಮಾಜವಾದಿ ವೇದಿಕೆ, ಬೆಂಗಳೂರು ಕೇಂದ್ರ ಕಚೇರಿ

## 2021 ಜನವರಿ–ಜೂನ್ ಅವಧಿಯ ವರದಿ

ಕೊವಿಡ್ ಕಾಲದಲ್ಲೂ **ಕರ್ನಾಟಕ ಸಮಾಜವಾದಿ ವೇದಿಕೆ** ಮೂಲಕ ಕಾರ್ಯ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬರಲಾಯಿತು.

ಸಮಾಜವಾದಿ ವೇದಿಕೆ ಬೆಂಗಳೂರು, ಮಂಡ್ಯ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸಂಚಾಲಕರನ್ನು ಹೊಂದಿದೆ. ಬೆಂಗಳೂರು ಜಿಲ್ಲಾ ಸಂಚಾಲಕರು ಮುಖ್ಯವಾಗಿ ಆನ್‌ಲೈನ್ ಸಭೆಗಳನ್ನು ಆಯೋಜಿಸಿದರು. ಮಂಡ್ಯ ಮತ್ತು ಹಾವೇರಿ ಜಿಲ್ಲಾ ಸಂಚಾಲಕರು ಪ್ರತಿವಾರ ಆನ್‌ಲೈನ್ ಸಭೆಗಳನ್ನು ನಡೆಸುವ ಜೊತೆಗೆ, ಅಲ್ಲಿಲ್ಲಿನ ಪ್ರಗತಿಪರ ಮಿತ್ರನ್ನು ಸಂಪರ್ಕಿಸಿ, ಕೆಲವೊಂದು ಕಾರ್ಯಕ್ರಮಗಳನ್ನು ನಡೆಸಿದರು.

ಎರಡೂ ಜಿಲ್ಲೆಗಳ ಸಂಚಾಲಕರು ಪ್ರತಿವಾರ ಜಿಲ್ಲಾ ಸಮಿತಿ ಸದಸ್ಯರುಗಳಿಗಾಗಿ ಆನ್‌ಲೈನ್ ಸಭೆಗಳನ್ನು ಏರ್ಪಡಿಸಿದರು. ಅಲ್ಲಿ ಕಾಂಗ್ರೆಸ್ ಸಮಾಜವಾದಿ ಗುಂಪು ಹುಟ್ಟಿದ್ದು, ಸಮಾಜವಾದಿ ಚಳವಳಿಯ ವಿವಿಧ ಘಟ್ಟಗಳು, ಪಕ್ಷ ನಡೆದುಕೊಂಡು ಬಂದ ದಾರಿ, ಸಮಾಜವಾದಿ ಮುಖಂಡರು ಚದುರಿ ಹೋಗಿದ್ದು ಮುಂತಾದ ವಿಷಯಗಳನ್ನು ತಿಳಿಸಲಾಯಿತು.

ಸಮಾಜವಾದಿ ವೇದಿಕೆ ಬಳಗದಲ್ಲಿ ಕೇವಲ ಒಂದು ಜಾತಿಯವರು ಇರುವುದು ಸರಿಯಲ್ಲ; ಮುಸ್ಲಿಮರನ್ನೂ ಒಳಗೊಳ್ಳುವ ಪ್ರಯತ್ನಗಳನ್ನು ಪ್ರಜ್ಞಾಪೂರ್ವಕವಾಗಿ ಮಾಡಬೇಕು. ಮಹಿಳೆಯರು ಕಡ್ಡಾಯವಾಗಿ ಇರಬೇಕು ಎಂಬುದನ್ನು ತಿಳಿಸಲಾಯಿತು.


ಸಮಾಜವಾದಿ ವಿಚಾರಗಳನ್ನು ಯುವಜನರಿಗೆ ಮುಟ್ಟಿಸಲು ಹಲವಾರು ರೀತಿಗಳಲ್ಲಿ ಪ್ರಯತ್ನಿಸಲಾಯಿತು. ಕೆಲವನ್ನು ಇಲ್ಲಿ ನೀಡಲಾಗಿದೆ.


* ಹೆಣ್ಣುಮಗು ಭವಿಷ್ಯ ರೂಪಿಸುವ ಕುರಿತು ಜಾರಿ ಆಗುತ್ತಿರುವ ಯೋಜನೆಗಳ ಬಗ್ಗೆ ರಾಯಚೂರಿನ ಶ್ರೀಮತಿ ಗಿರಿಜಾ ಅವರು ಜನವರಿ 3ರಂದು ಆನ್‌ಲೈನ್ ಕ್ಲಾಸ್‌ನಲ್ಲಿ ವಿವರಗಳನ್ನು ಹಂಚಿಕೊಂಡರು. ಇದಕ್ಕಾಗಿ ರೂಪಿಸಿದ ಪೋಸ್ಟರ್ ಹಲವರಿಗೆ ಇಷ್ಟವಾಯಿತು (ಪೋಸ್ಟರ್ ಕೆಳಗಿದೆ)

* ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನಲ್ಲಿ ಇರುವ ಕಾಲೇಜು, ಮತ್ತು ಹೈಸ್ಕೂಲ್ ಶಿಕ್ಷಕರನ್ನು ರಾಹುಲ್ ಸಿಂಗೆ ಮತ್ತು ಡಿ.ಎಂ. ನದಾಫ್ ನೆರವಿನೊಂದಿಗೆ ಸಂಪರ್ಕಿಸಲು ಪ್ರಯತ್ನಿಸಲಾಯಿತು.

* ಯುವಜನರಿಗೆ ಸಂವಿಧಾನವನ್ನು ಅರ್ಥೈಸಿಕೊಡಲು ಮೇ 10ರಿಂದ ಪ್ರಾರಂಭಿಸಿ ಆರು ಗಂಟೆಗಳ ಕ್ಲಾಸ್ ಆರು ದಿನಗಳ ಕಾಲ ನಡೆಸಲಾಯಿತು. (ಪೋಸ್ಟರ್ ಕೆಳಗಿದೆ)

* ಟಿ. ನರಸೀಪುರ ತಾಲ್ಲೂಕಿನಲ್ಲಿ ಪ್ರಸನ್ನ ಕುಮಾರ್ ನೆರವು ಪಡೆದು, ಅಲ್ಲಿನ ಕಾಲೇಜು ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿನಿಯರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು.



* ಪ್ರತಿ ಬುಧವಾರ ಯುವ ಮಿತ್ರರೊಂದಿಗೆ 7ಪಿಎಂ ಆನ್‌ಲೈನ್ ಸಭೆ ನಡೆಸಿ, ಹಲವಾರು ವಿಷಯಗಳ ಬಗ್ಗೆ ತಿಳಿಸಿ ಕೊಡಲು ಹಲವರು ಪರಿಣತರನ್ನು ಆಹ್ವಾನಿಸಲಾಯಿತು.

* ಮಂಡ್ಯ–ಹಾವೇರಿ ಜಿಲ್ಲೆಗಳಲ್ಲಿ ವಿವಿಧ ಜನಪರ ಸಂಘಟನೆಗಳ (ಉದಾ: ಮಾನವ ಬಂಧುತ್ವ ವೇದಿಕೆ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ, ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ) ಜೊತೆಗೆ ಸಮಾಜವಾದಿ ವೇದಿಕೆ ಚಟುವಟಿಕೆಗಳನ್ನು ಸಂಯೋಜಿಸುವ ಬಗ್ಗೆ ತಿಳಿಸಲಾಯಿತು.

* 10 ಮಾರ್ಚ್ 10ರಂದು 'ಟಿಬೆಟ್ ಬಂಡಾಯ ದಿನ' ಕುರಿತು ತಿಳಿಸಲಾಯಿತು. 1950ರ ದಶಕದಲ್ಲಿ ಈ ವಿಷಯದ ಬಗ್ಗೆ ಜಯ ಪ್ರಕಾಶ ನಾರಾಯಣ, ಲೋಹಿಯಾ ನೀಡಿದ್ದ ಹೇಳಿಕೆಗಳನ್ನು ಮತ್ತು ಸಮಾಜವಾದಿ ಪಕ್ಷ ಕೈಗೊಂಡ ನಿರ್ಣಯವನ್ನು ಓದಲಾಯಿತು.

* ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪಿಎಚ್.ಡಿ. ಸಂಶೋಧಕಿಯರ ಜೊತೆಗೆ ಸಭೆ ನಡೆಸಲಾಯಿತು.

* ರಮಜಾನ್ ಪ್ರಯುಕ್ತ ಕರ್ನಾಟಕ ಮುಸ್ಲಿಂ ಜಮಾತ್ ಮಿತ್ರರ ಜೊತೆಗೆ 'ಸೌಹಾರ್ದ ಸಭೆ' ಗಾಗಿ ಪೋಸ್ಟರ್ ರಚಿಸಲಾಯಿತು. (ಇದು ಪಕ್ಕದಲ್ಲಿದೆ). ಇದನ್ನು ಹಲವು ವಾಟ್ಸ್ಯಾಪ್ ಗುಂಪುಗಳಲ್ಲಿ ಹಾಕಿ, ಆಸಕ್ತರನ್ನು ಆಹ್ವಾನಿಸಲಾಯಿತು. ರಮಜಾನ್ ಬಗ್ಗೆ ಮತ್ತು ಮುಸ್ಲಿಮರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿ–ಗತಿ ಬಗ್ಗೆ ವಿಚಾರ ವಿನಿಮಯ ನಡೆಸಲಾಯಿತು.

* ಚನ್ನಪಟ್ಟಣ ತಾಲ್ಲೂಕಿನಲ್ಲಿ ಇರುವ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರಿಗೆ ಸಮಾಜವಾದಿ ವಿಚಾರ ತಿಳಿಸುವ ಕ್ಲಾಸ್ ಮಾಡುವ ಬಗ್ಗೆ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಯನ್ನು ಸಂಪರ್ಕಿಸಲಾಯಿತು.

ಕೊವಿಡ್ ಕರ್ತವ್ಯ ಮುಗಿದ ಬಳಿಕ, ಜುಲೈ–ಆಗಸ್ಟ್ ಹೊತ್ತಿಗೆ ಈ ಬಗ್ಗೆ ಮಾತನಾಡುವಂತೆ ಅಧಿಕಾರಿ ತಿಳಿಸಿದರು.

* 'ಬನ್ನಿ, ಸಂವಿಧಾನವನ್ನು ಅರ್ಥಮಾಡಿಕೊಳ್ಳೋಣ' ಎಂಬ ಶೀರ್ಷಿಕೆ ಅಡಿಯಲ್ಲಿ ಆನ್‌ಲೈನ್ ಕ್ಲಾಸ್ ಜೂನ್ 10–13 ರಂದು ನಡೆಸಲಾಯಿತು. (ಪೋಸ್ಟರ್ ಪಕ್ಕದಲ್ಲಿದೆ) ಇದರಲ್ಲಿ ಬೆಂಗಳೂರು, ಬೆಳಗಾವಿ, ತುಮಕೂರು, ಚಿಕ್ಕಬಳ್ಳಾಪುರ, ಕಲಬುರಗಿ, ಹಾಸನ, ಬಳ್ಳಾರಿ, ಮಂಗಳೂರು ಮುಂತಾದ ಜಿಲ್ಲೆಗಳ ಒಟ್ಟು 23 ಯುವಜನರು ಭಾಗವಹಿಸಿದ್ದರು.

ಇವರಲ್ಲಿ ಇಬ್ಬರು ಕೆಲಸದಲ್ಲಿದ್ದವರು ಆಸಕ್ತಿ ತೋರಿ ನೋಂದಣಿ ಮಾಡಿಕೊಂಡಿದ್ದರು. ಇವರು ಶುಲ್ಕವನ್ನು ಪಾವತಿಸಿದರು.

* ಕರ್ನಾಟಕ ಸಮಾಜವಾದಿ ವೇದಿಕೆ ಬಗ್ಗೆ ವಾಟ್ಸ್ಯಾಪ್ ಗುಂಪಿನಲ್ಲಿ ಮಾಹಿತಿ ಪಡೆದುಕೊಂಡ ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ಬಿಲಗುಂದ ಗ್ರಾಮದ ಶಿಕ್ಷಕಿ ಎಚ್.ಜಿ.ಸಾವಿತ್ರಿ ಫೋನ್ ಮಾಡಿ, 'ಸಮಾಜವಾದಕ್ಕೆ ಸಂಬಂಧಿಸಿದ ಪುಸ್ತಕಗಳು ಇದ್ದರೆ ಕಳಿಸಿ ಕೊಡಿ' ಎಂದು ವಿನಂತಿಸಿದರು.

ತಮ್ಮೊಂದಿಗೆ ಕದನೂರು ಗ್ರಾಮ ಪಂಚಾಯತಿ ಸದಸ್ಯೆ ಕೆ.ಎಂ. ಕಾವೇರಿ ಕೂಡ ಈ ವಿಷಯದಲ್ಲಿ ಆಸಕ್ತಿ ಹೊಂದಿರುವುದಾಗಿ






ತಿಳಿಸಿದರು. ಇಬ್ಬರಿಗೂ ಪುಸ್ತಕಗಳನ್ನು ಕಳಿಸಲಾಯಿತು.

* 'ಭಾರತದ ಸಮಾಜವಾದದ ಇತಿಹಾಸ' ತಿಳಿಸುವ ಆನ್‌ಲೈನ್ ಕಾರ್ಯಕ್ರಮ ಕುರಿತು ಪೋಸ್ಟರ್ ಮಾಡಿ, ಪ್ರಸಾರ ಮಾಡಲಾಯಿತು. (ಪೋಸ್ಟರ್ ಪಕ್ಕದಲ್ಲಿದೆ) ಇದನ್ನು ಜೂನ್ 25ರಂದು ನಡೆಸಲಾಯಿತು. ಇದರಲ್ಲಿ ಜಿಲ್ಲೆಯ 27 ಯುವಜನರು ಭಾಗವಹಿಸಿದ್ದರು.

* ತುಮಕೂರು ಜಿಲ್ಲೆಯ ಉತ್ಸಾಹಿ ಮಿತ್ರರ ಬಳಗ 'ಯುವ ಧ್ವನಿ' ಎಂಬ ಎ4 ಆಕಾರದ 12 ಪುಟಗಳ ಮಾಸಪತ್ರಿಕೆಯನ್ನು ಹೊರತರಲು ನಿರ್ಧರಿಸಿದಾಗ, ಅವರೊಂದಿಗೆ ಸೇರಿ, ಸಮಾಜವಾದಿ ಚಿಂತನೆಯನ್ನು ಯುವ ಜನರಿಗೆ ಪರಿಚಯಿಸುವ ಅವಕಾಶ ದೊರಕೀತು ಎಂದು ಭಾವಿಸಿ, 'ಕರ್ನಾಟಕ ಸಮಾಜವಾದಿ ವೇದಿಕೆ' ವತಿಯಿಂದ ನೆರವು ನೀಡುವ ಬಗ್ಗೆ ತಿಳಿಸಲಾಯಿತು. (ಪತ್ರಿಕೆಯ ಮೊದಲನೇ ಪುಟ ಕೆಳಗಿದೆ).

* ಶಾಂತವೇರಿ ಗೋಪಾಲಗೌಡ ಅವರ ಬಗ್ಗೆ ಪಿಯು ಮಕ್ಕಳಿಗೆ ಅರ್ಥವಾಗುವಂತೆ ಕಿರುಪುಸ್ತಕ ಸಿದ್ಧಪಡಿಸಲು ಡಾ॥ ನೂರಂದಪ್ಪ ಅವರಿಗೆ ವಿನಂತಿ ಮಾಡಿಕೊಳ್ಳಲಾಯಿತು.

* 'ಸಮಾಜವಾದದ ಇತಿಹಾಸ' ಕುರಿತು ಜೂನ್ 28 ಮತ್ತು 29ರಂದು ಆನ್‌ಲೈನ್ ಕ್ಲಾಸ್ ಮಾಡಲಾಯಿತು. (ಪೋಸ್ಟರ್ ಕೆಳಗೆ ಬಲಭಾಗದಲ್ಲಿದೆ). ಇದರಲ್ಲಿ ಬೇರೆ ಬೇರೆ ಜಿಲ್ಲೆಗಳ 17 ಜನರು ಭಾಗವಹಿಸಿದ್ದರು.

ಹನುಮಂತ ಎಂಬ ಒಬ್ಬ ಯುವಕ, 'ನನ್ನ ಇಬ್ಬರು ಮಿತ್ರರಿಗೆ ಈ ಕ್ಲಾಸ್ ಮಿಸ್ ಆಯಿತು; ಮತ್ತೆ ಯಾವಾಗ ಕ್ಲಾಸ್ ಮಾಡ್ತೀರಾ?' ಎಂದು ಕೇಳಿದ.

* ಕೊವಿಡ್ ಹಿನ್ನೆಲೆಯಲ್ಲಿ ಸರ್ಕಾರ ಗುರುತಿಸಿದ ಹನ್ನೊಂದು (ಅಗಸರು, ಕ್ಷೌರಿಕರು, ಗೃಹಕಾರ್ಮಿಕರು, ಟೈಲರ್, ಮೆಕ್ಯಾನಿಕ್, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರರು ಕುಂಬಾರರು ಮತ್ತು ಭಟ್ಟಿ ಕಾರ್ಮಿಕರು) ವೃತ್ತಿಯಲ್ಲಿ ಇರುವ ಕಾರ್ಮಿಕರಿಗೆ ಮಾಸಾಶನ ರೂ.2000/– ಕೊಡುವ ವಿಷಯವನ್ನು






ಹೊಸ ತಲೆಮಾರಿನ ಒಳದನಿ

ಖಾಸಗಿ ಪ್ರಸಾರಕ್ಕಾಗಿ

# ಯುವ ಧ್ವನಿ

ಸಂಪುಟ–1 ಸೂಚಿತ ಕೊಡುಗೆ ರೂ. 10/– ಸಂಚಿಕೆ–2 ಜೂನ್ 2021

ರಾಜಕೀಯ ಪಕ್ಷಗಳ ಪರಿಧಿಯೊಳಗೆ

## ಯುವಜನರು ಇದ್ದಾರೆಯೇ?

ಭಾರತದ ಭವಿಷ್ಯವನ್ನು ನಿರ್ಧಾರ ಮಾಡುವ ಹೊತ್ತಿನಲ್ಲಿ ಇಲ್ಲಿ ಯಾರು ದೇಶದ ಅಭಿವೃದ್ಧಿಗೆ ಮಹತ್ತರ ಕೊಡುಗೆ ಕೊಡಬಲ್ಲರು? ಯಾರು ಗಣನೀಯ ಸಂಖ್ಯೆಯಲ್ಲಿ ಇರುವರು? ಎಂಬುದನ್ನು ನೋಡಬೇಕಾಗುತ್ತದೆ. ಹೀಗೆ ನೋಡಿದಾಗ, ಇಂಥವರು ದೇಶದ ಯುವಜನರು ಎಂಬುದು ಸ್ಪಷ್ಟವಾಗುತ್ತದೆ.

ಆದರೆ, ಇವರ ಶಕ್ತಿಯನ್ನು, ಕಾಳಜಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆ ನಮ್ಮ ರಾಜಕಿಯ ಪಕ್ಷಗಳು ಆಸಕ್ತಿಯನ್ನು ತೋರುತ್ತಿವೆಯೆ? ಎಂಬ ಪ್ರಶ್ನೆ ಎದುರಾದಾಗ, 'ಇಲ್ಲ' ಎಂಬ ಉತ್ತರ ಸ್ಪಷ್ಟವಾಗಿ ಕಾಣುತ್ತದೆ. ಇದು ನಿರಾಶಾದಾಯಕ ಎಂದು ಕಂಡರೂ ಸತ್ಯವಾದುದು.

ಪ್ರತಿಯೊಂದು ಪಕ್ಷವೂ ಯುವಜನರ ಬಗ್ಗೆ ಮಾತನಡುತ್ತದೆ. ಪ್ರತಿ ಪಕ್ಷದಲ್ಲೂ ಯುವಜನ ವಿಭಾಗಗಳಿವೆ, ವಿದ್ಯಾರ್ಥಿ ಘಟಕಗಳಿವೆ. ಈ ಎಲ್ಲಾ ಘಟಕಗಳಿಗೆ ಜಿಲ್ಲಾಮಟ್ಟದ ಮತ್ತು ರಾಜ್ಯಮಟ್ಟದ ಪದಾಧಿಕಾರಿಗಳಿದ್ದಾರೆ.

ಅಂದ ಮೇಲೆ ಇವರು ಯುವಜನರ ಪರವಾಗಿ ಏನು ಮಾಡುತ್ತಿದ್ದಾರೆ? ಯುವಜನ ಅಭಿವೃದ್ಧಿ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದಂತೆ ಅವರಲ್ಲಿ ಏನು ಕಾರ್ಯಯೋಜನೆಗಳಿವೆ? ಅವುಗಳನ್ನು ಅವರು ಎಲ್ಲಿ ಸಾರ್ವಜನಿಕಗೊಳಿಸಿದ್ದಾರೆ? ಎಂಬಂಥ ಪ್ರಶ್ನೆಗಳನ್ನು ಕೇಳುವುದು ಅನಿವಾರ್ಯ.

ರಾಜಕೀಯ ಪಕ್ಷಗಳು ಯುವಜನರನ್ನು ಕೇವಲ ನಾಮ್ ಕೆ ವಾಸ್ತೆ ಸೇರಿಸಿಕೊಂಡಿವೆಯೆ? ಹೋರಾಟ ಮಾಡಲಿಕ್ಕೆ ಹಾಗೂ ತಮ್ಮ ಪಕ್ಷವನ್ನು ಅಧಿಕಾರಕ್ಕೆ ತರಲು ಕಾಲಾಳುಗಳಂತೆ ದುಡಿಯಲು ಮಾತ್ರ ಅವರು ಸೀಮಿತವೆ?

ವಿದ್ಯಾರ್ಥಿ ಮತ್ತು ಯುವಜನ ವಿಭಾಗದ ಈ ಮುಖಂಡರಾದರೂ ಗಟ್ಟಿ ಧ್ವನಿಯಲ್ಲಿ ತಮ್ಮ ಹಕ್ಕುಗಳು ಏನ? ತಮ್ಮ ಜವಾಬ್ದಾರಿ ಏನು? ಎಂಬುದನ್ನು ಹಿರಿಯರಿಂದ ತಿಳಿದುಕೊಂಡು, ಪಕ್ಷದ ಪರವಾಗಿ ಚೆನ್ನಾಗಿ ದುಡಿದು, ಪಕ್ಷದ ಮೂಲಕ ಹೆಚ್ಚು ಯುವಜನರು ಚುನಾವಣಾ ಕಣಕ್ಕೆ ಇಳಿಯುವಂತೆ ನೋಡಿಕೊಳ್ಳಬೇಕು. ರಾಜ್ಯದ ಜನಪರ ಧ್ವನಿ ಎತ್ತಬೇಕು, ಅಲ್ಲವೆ? ಇವರು ತಮ್ಮ ಪಕ್ಷದಲ್ಲಿ ಕೇವಲ ಹೌದಪ್ಪಗಳಾಗಿರುವುದು ಏಕೆ?

ಕರ್ನಾಟಕದ ಜನಸಂಖ್ಯೆ ಆರೂವರೆ ಕೋಟಿ. ಇದರಲ್ಲಿ ಎರಡು ಕೋಟಿ ಯುವಜನ ಇದ್ದಾರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇರುವ ಯುವ ಸಮುದಾಯದ ಆಶೋತ್ತರಗಳ ಬಗ್ಗೆ ಯಾವ ರಾಜಕಿಯ ಪಕ್ಷಗಳಲ್ಲಾದರೂ ಗಂಭೀರ ಚರ್ಚೆಗಳಾಗುತ್ತಿವೆಯೇ? ದುಡಿಯುವ ಕೈಗಳಿಗೆ ಉದ್ಯೋಗವಿಲ್ಲದೆ ನಿರುದ್ಯೋಗ ತಾಂಡವವಾಡುತ್ತಿದೆ. ಈ ಕುರಿತು ನಿರ್ದಿಷ್ಟ ನೀತಿಯನ್ನು ಪಕ್ಷಗಳು ಏಕೆ ಪ್ರಕಟಿಸುವುದಿಲ್ಲ. ಅಧಿಕಾರಕ್ಕೆ ಬಂದಾಗ ಆ ನಿಟ್ಟಿನಲ್ಲಿ ಏಕೆ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ? ಎಂಥೆಂಥದೊ 'ಭಾಗ್ಯ'ಗಳ ಬಗ್ಗೆ ಆಶ್ವಾಸನೆ ನೀಡುವ ಮತ್ತು ಜಾರಿಗೊಳಿಸುವ ಪಕ್ಷಗಳು, ಯುವಜನರಿಗೆ 'ಉದ್ಯೋಗ ಭಾಗ್ಯ' ಕೊಡುವ ಬಗ್ಗೆ ಏಕೆ ನಿರ್ಲಕ್ಷ್ಯ ತೋರುತ್ತಿವೆ? ಕೆಲಸವಿಲ್ಲದ ಯುವಜನರಿಗೆ ಕೆಲಸ ಕೊಟ್ಟರೆ ಈ ಭಾಗ್ಯಗಳ ಹಂಗೇಕೆ? ರಾಜ್ಯಕ್ಕೆ ಸಾಲದ ಹೊರೆ ಏಕೆ? ಜಾಗೃತ ಮತ್ತು ವಿಚಾರವಂತ ಯುವಜನರ ಪ್ರಶ್ನೆ ಇವು.

ಉದ್ಯೋಗ ಬಯಸುವ ಕೋಟ್ಯಂತರ ಯುವಜನರಿಗೆ ದಿಕ್ಕು ಸರ್ಕಾರ ಅಲ್ಲವೇ?

**ಯುವಜನರನ್ನು ಸಬಲೀಕರಿಸಲು, ಅವರಿಗಾಗಿ ಯೋಜನೆ ಮತ್ತು ಕಾರ್ಯಕ್ರಮ ರೂಪಿಸಲು, ಯುವಜನರ ಮುಂದಿರುವ ಸವಾಲುಗಳನ್ನು ಅರಿಯಲು ಇದಕ್ಕೆ ಪೂರಕವಾಗಿ ಸಂಶೋಧನೆ ಕೈಗೊಳ್ಳಲು, ಯುವಜನರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಲು 'ರಾಜ್ಯ ಯುವಜನ ಆಯೋಗ' ರಚಿಸುವುದು ಅತಿ ಮುಖ್ಯ.**

ರಾಜ್ಯದ ಸಾಮಾನ್ಯ ಯುವಜನರು ನಿರುದ್ಯೋಗದ ವಿರುದ್ಧ ಧ್ವನಿ ಎತ್ತುತ್ತಾ ಬಂದಿದ್ದಾರೆ. ಆದರೆ, ಇದು ಇನ್ನಷ್ಟು ಶಕ್ತಿಯನ್ನು ಪಡೆದುಕೊಳ್ಳಬೇಕು. ಈ ಧ್ವನಿಗೆ ಎಲ್ಲಾ ಯುವಜನರೂ ತಮ್ಮ ಧ್ವನಿ ಸೇರಿಸಬೇಕು. ಈ ಕುರಿತು ಗಂಭೀರವಾಗಿ ಆಲೋಚನೆ ಮಾಡಿ, ಸಂಘಟನೆಯಾಗಿ, ಸರ್ಕಾರ ಅಗತ್ಯ ನೀತಿ ರೂಪಿಸುವಂತೆ ಒತ್ತಾಯಿಸಬೇಕು.

ಯುವಜನರು ಮಾದಕ ಪದಾರ್ಥಗಳ ಕಡೆ, ಅಪರಾಧಗಳ ಕಡೆ ಹೊರಳಿದ್ದಾರೆ; ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ; ಸಮಾಜವಿರೋಧಿ ಕೃತ್ಯಗಳಲ್ಲಿ ತೊಡಗಿದ್ದಾರೆ.. .. ಎಂದೆಲ್ಲಾ ಹೇಳುವ ರಾಜಕಾರಣಿಗಳು ನೀತಿ ನಿರೂಪಕರು, 'ಇದಕ್ಕೆಲ್ಲಾ ಕಾರಣಗಳೇನು?' ಎಂಬ ಬಗ್ಗೆ ಚಿಂತನೆ ನಡೆಸಿದ್ದಾರೆಯೇ?



ಸಂಬಂಧಿಸಿದವರಿಗೆ ತಿಳಿಸಿ, ಅವರು ಅದನ್ನು ಪಡೆದುಕೊಳ್ಳುವ ಕಾರ್ಯದಲ್ಲಿ ನೆರವು ಒದಗಿಸುವಂತೆ ಮಂಡ್ಯ ಮತ್ತು ಹಾವೇರಿ ಜಿಲ್ಲೆಯಲ್ಲಿರುವ ಸಮಾಜವಾದಿ ವೇದಿಕೆ ಜಿಲ್ಲಾ ಸಂಚಾಲಕರಿಗೆ ತಿಳಿಸಲಾಯಿತು.

* ಬೆಂಗಳೂರು ಕಚೇರಿಯಿಂದ (ನನ್ನ ಮನೆಯೇ ಕಚೇರಿ) ರಾಜ್ಯದ ವಿವಿಧ ಕಡೆ ಇರುವ ಮಹಿಳೆಯರನ್ನು, ವಿದ್ಯಾರ್ಥಿನಿಯರನ್ನು, ಯುವಕರನ್ನು, ದಲಿತರನ್ನು ಸಮಾಜವಾದದ ಕಡೆಗೆ ಆಕರ್ಷಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

* ಸ್ವರಾಜ್ ಇಂಡಿಯಾ, ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ ಮತ್ತು ಚಿಕ್ಕ ಪುಟ್ಟ ಗುಂಪು/ಸಂಘಟನೆಗಳಿಗೆ ಸಮಾಜವಾದವನ್ನು ಪರಿಚಯ ಮಾಡಿಕೊಡುವ ಪ್ರಯತ್ನಗಳು ನಡೆದಿವೆ. ■




ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಹತ್ವವನ್ನು ತಿಳಿಸುವ ಕಾರ್ಡ್‌ಗಳನ್ನು ದಾವಣಗೆರೆಯಲ್ಲಿ ಮುಸ್ಲಿಂ ಮಹಿಳಾ ಒಕ್ಕೂಟದ ಸದಸ್ಯರುಗಳಿಗೆ ವಿತರಣೆ ಮಾಡಲಾಯಿತು




ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ರಾಜೇಶ್ವರಿ ವಿದ್ಯಾಶಾಲೆಯ ಹತ್ತನೇ ತರಗತಿ ಮಕ್ಕಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ತಿಳಿಸಿ, ಆ ವಿಷಯದ ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು.




ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಮಾಹಿತಿ ನೀಡುವ ಕಾರ್ಡ್‌ಗಳ ವಿತರಣೆ

**ವಿವಿಧ ಕಡೆ ಮುಖ್ಯವಾಗಿ ಮಂಡ್ಯ, ಹಾವೇರಿ, ದಾವಣಗೆರೆ, ರಾಯಚೂರು ಜಿಲ್ಲೆಗಳಲ್ಲಿ (1) ನಮ್ಮ ಸಂವಿಧಾನ–ಅತಿ ಸಂಕ್ಷಿಪ್ತದಲ್ಲಿ (2) ವಿರೋಧಾಭಾಸ ಕೂಡಲೇ ಕೊನೆಯಾಗಲಿ (3) ಅರಿವಿನ ಕಡೆಗೆ ನಮ್ಮ ನಡಿಗೆ (4) ಮಾರ್ಗದರ್ಶಿ ರಾಮಮನೋಹರ ಲೋಹಿಯಾ (5) ಗಾಂಧಿ ಹತ್ಯೆಯ ಹಿನ್ನೆಲೆ) ಕಿರುಪುಸ್ತಕಗಳನ್ನು ವಿತರಣೆ ಮಾಡಲಾಗಿದೆ**



(ಮೇಲೆ ಮತ್ತು ಪಕ್ಕ) ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಮಾಹಿತಿ ನೀಡುವ ಕಾರ್ಡ್‌ಗಳನ್ನು ಪಡೆದುಕೊಂಡು, ಓದುತ್ತಿರುವ ವಿದ್ಯಾರ್ಥಿಗಳು





ಮತ್ತೊಂದು ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಮಾಹಿತಿ ನೀಡುವ ಕಾರ್ಡ್‌ಗಳನ್ನು ಪಡೆದುಕೊಂಡು, ಓದುತ್ತಿರುವ ವಿದ್ಯಾರ್ಥಿಗಳು




ಇನ್ನೊಂದು ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಮಾಹಿತಿ ನೀಡುವ ಕಾರ್ಡ್‌ಗಳನ್ನು ಪಡೆದುಕೊಂಡು, ಅವುಗಳನ್ನು ತೋರಿಸುತ್ತಿರುವ ವಿದ್ಯಾರ್ಥಿನಿಯರು

# ಕರ್ನಾಟಕ ಸಮಾಜವಾದಿ ವೇದಿಕೆ, ಹಾವೇರಿ ಜಿಲ್ಲಾ ಶಾಖೆ

## 2021 ಜನೆವರಿ–ಜೂನ್ ಅವಧಿಯ ವರದಿ

**ಜನೆವರಿ**

ಹಾವೇರಿ ಜಿಲ್ಲೆಯಲ್ಲಿ ಕರ್ನಾಟಕ ಸಮಾಜವಾದಿ ಫೋರಮ್ 1 ಜನೆವರಿ 2021ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಕರಿಬಸಪ್ಪ ಎಂ. ಇವರು ಜಿಲ್ಲಾ ಸಂಚಾಲಕರಾಗಿದ್ದಾರೆ. ಜಿಲ್ಲಾ ಶಾಖೆಯ ಲೆಟರ್‌ಹೆಡ್ ಮಾಡಿಸಲಾಯಿತು. ತಳಮಟ್ಟದ ಕೆಲಸಗಳನ್ನು ಮಾಡುತ್ತಾ, (ಅಂದರೆ ಬೇಕಾದಂಥ ಮಾಹಿತಿಗಳನ್ನು ಸಂಗ್ರಹಿಸುವ, ಆಸಕ್ತಿ ಇರಬಹುದೆಂದು ಭಾವಿಸಿದವರನ್ನು ಭೇಟಿ ಮಾಡುವ, ಜಿಲ್ಲಾ ಮಟ್ಟದಲ್ಲಿ ನಡೆಯುವ ಬೇರೆ ಬೇರೆ ಸಭೆಗಳಿಗೆ ಹಾಜರಾಗುವ, ಅಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ ಬಗ್ಗೆ ಮಾಹಿತಿಯನ್ನು ನೀಡುವ ಇತ್ಯಾದಿ) ಕಾರ್ಯಚಟುವಟಿಕೆಗಳನ್ನು ನಡೆಸಲಾಯಿತು.




ಕರ್ನಾಟಕ ಸಮಾಜವಾದಿ ವೇದಿಕೆಯ ಲೆಟರ್‌ಹೆಡ್

ಜನೆವರಿ 10ರಂದು, ಸಮಾಜವಾದಿ ವೇದಿಕೆಯ ಸಂಕ್ಷಿಪ್ತ ಪರಿಚಯವನ್ನು ನೀಡಿ, 'ಜಿಲ್ಲೆಯಲ್ಲಿ ಸಮಾಜವಾದಿ ವೇದಿಕೆ ಪ್ರಾರಂಭವಾಗಿದೆ, ಆಸಕ್ತರು ಸಂಪರ್ಕಿಸಿ' ಎಂಬ ಮಾಹಿತಿಯನ್ನು ಮಾಧ್ಯಮದ ಮೂಲಕ ಪ್ರಸಾರ ಮಾಡಲಾಯಿತು.

ಜನೆವರಿ 24ರಂದು ಹಾವೇರಿ ತಾಲ್ಲೂಕಿನ ದೇವಗಿರಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ 'ರಾಷ್ಟ್ರೀಯ ಹೆಣ್ಣು ಮಕ್ಕಳ ರಕ್ಷಣಾ ದಿನ'ದ ಅಂಗವಾಗಿ 'ಫಾತಿಮಾ ಶೇಖ್ ಮತ್ತು ಸಾವಿತ್ರಿ ಬಾಯಿ ಫುಲೆ' ಕುರಿತು ಕಾರ್ಯಕ್ರಮ ಮಾಡಲಾಯಿತು. ಹಾವೇರಿ ಶಿಕ್ಷಕರ ಸಂಘದ ಅಧ್ಯಕ್ಷರು ರಿಯಾಜ್ ಅಹಮದ್ ಕುಂದಗೋಳ್, ಅಂಗನವಾಡಿ ಕಾರ್ಯಕರ್ತೆ ಮತ್ತು ರೇಖಾ ಹೊಳಲ, ಚಮನ ಸಾಬ್ ಗುಳೇದ ಮತ್ತು ನಾಗರಾಜ ಬಕ್ಕಣ್ಣನವರ ಎಂಬ ಮೂವರು ನೂತನ ಗ್ರಾಮ ಪಂಚಾಯತ್ ಸದಸ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ದೇವಗಿರಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ 'ರಾಷ್ಟ್ರೀಯ ಹೆಣ್ಣು ಮಕ್ಕಳ ರಕ್ಷಣಾ ದಿನ' ಕಾರ್ಯಕ್ರಮ

ಡಾ॥ ಬಿ.ಆರ್.ಅಂಬೇಡ್ಕರರು ಸಂವಿಧಾನ ರಚನಾ ಸಭೆಯಲ್ಲಿ ಮಾಡಿದ ಕೊನೆಯ ಭಾಷಣದ ಕನ್ನಡ ಅನುವಾದ 'ವಿರೋಧಾಭಾಸ ಕೂಡಲೇ ಕೊನೆಯಾಗಲಿ', 'ಗಾಂಧಿ ಹತ್ಯೆಯ ಹಿನ್ನೆಲೆ', 'ನಮ್ಮ ಸಂವಿಧಾನ' (ಅತಿ ಸಂಕ್ಷಿಪ್ತದಲ್ಲಿ), 'ಅರಿವಿನ ಕಡೆಗೆ ನಮ್ಮ ನಡಿಗೆ' ಮತ್ತು 'ಪ್ರಥಮ ಮುಸ್ಲಿಂ ಶಿಕ್ಷಕಿ–ಫಾತಿಮಾ ಶೇಖ್' ಎಂಬ ಕಿರುಪುಸ್ತಕ ಹಾಗೂ ಫೋಲ್ಡರ್‌ಗಳನ್ನು ಹಾವೇರಿ ಜಿಲ್ಲಾ ಶಾಖೆ ಪರವಾಗಿ ಜಿಲ್ಲೆಯ ಆಸಕ್ತರಲ್ಲಿ ವಿತರಣೆ ಮಾಡಲಾಯಿತು.




ಕರ್ನಾಟಕ ಸಮಾಜವಾದಿ ವೇದಿಕೆಯನ್ನು ಪರಿಚಯಿಸಲು ವಿವಿಧ ಯುವಜನರಿಗೆ ಮತ್ತು ಹಿರಿಯರಿಗೆ ನೀಡಲಾದ ಪುಸ್ತಕಗಳು

ಅಲ್ಲದೆ, ಲ್ಲೆಯಲ್ಲಿ ಶಿಕ್ಷಕರ ಸಭೆ, ಪುಸ್ತಕ ಬಿಡುಗಡೆ ಕಾರ್ಯಕ್ರಮ ಮುಂತಾದವುಗಳ ನಡೆದಾಗ ಅಲ್ಲಿಗೆ ಹೋಗಿ, ಕರ್ನಾಟಕ ಸಮಾಜವಾದಿ ವೇದಿಕೆ, ಹಾವೇರಿ ಜಿಲ್ಲಾ ಶಾಖೆ ಬಗ್ಗೆ ಮಾಹಿತಿ ನೀಡಿ, ಪುಸ್ತಕಗಳನ್ನು ವಿತರಣೆ ಮಾಡಲಾಯಿತು.

**ಫೆಬ್ರುವರಿ**

ಫಾತಿಮಾ ಶೇಖ್ ಅವರ ಜನ್ಮದಿನದ ಪ್ರಯುಕ್ತ ಅವರ ವಿಚಾರಗಳನ್ನು ತಿಳಿಸುವ ಕಾರ್ಯಕ್ರಮವನ್ನು ಹಾವೇರಿ ನಗದ ಸರ್ಕಾರಿ ಎಂ.ಪಿ.ಯು.ಎಸ್. ಶಾಲೆಯಲ್ಲಿ ನಡೆಸಲಾಯಿತು. 70 ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮತ್ತು ಶಾಲೆಯ ಶಿಕ್ಷಕರು ಭಾಗಿಯಾಗಿದ್ದರು.

ಕರ್ನಾಟಕ ಸಮಾಜವಾದಿ ವೇದಿಕೆ ಫಾತಿಮಾ ಶೇಖ್ ಬಗ್ಗೆ ಪ್ರಕಟಿಸಿದ್ದ ಫೋಲ್ಡರ್ ಮತ್ತು 'ಪ್ರಮುಖ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳು' ಎಂಬ ಎಂಟು ಕಾರ್ಡ್‌ಗಳನ್ನು ಬಿಡುಗಡೆ ಮಾಡಿ, ಅವುಗಳನ್ನು ಎಲ್ಲಾ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ನೀಡಲಾಯಿತು.

ಪ್ರತಿಯೊಂದು ಕಾರ್ಡಿನಲ್ಲಿ ಇರುವ ವಿಷಯವನ್ನು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ ಓದಿಸಲಾಯಿತು. ಆ ಬಗ್ಗೆ ವಿವರಣೆಗಳನ್ನು ನೀಡಲಾಯಿತು.

ಪ್ರಜಾವಾಣಿ ಹಾವೇರಿ ಆವೃತ್ತಿಯಲ್ಲಿ 'ಸ್ವಾತಂತ್ರ್ಯ ಹೋರಾಟಗಾರರಿಗೆ ಪೆನ್ಷನ್ ವಿತರಣೆಯಲ್ಲಿ ನಿಧಾನ' ಎಂಬ ಸುದ್ದಿ ಗಮನಿಸಿ, ಆ ಕುರಿತು ಪತ್ರಿಕಾ ಹೇಳಿಕೆ ನೀಡಲಾಯಿತು.

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಹೋಗಿ, 2015–2020ರ ಅವಧಿಯಲ್ಲಿ ಜಿಲ್ಲೆಯಲ್ಲಿ ನಡೆದಿರುವ ಅಂತರಜಾತಿ ವಿವಾಹಿತರ ಬಗೆಗೆ ಮಾಹಿತಿಯನ್ನು ಕೋರಿ, ಅರ್ಜಿ ಸಲ್ಲಿಸಲಾಯಿತು.

ಜಿಲ್ಲಾ ಸಮಿತಿಯಲ್ಲಿ ಇರುವ ಹತ್ತಾರು ಮಿತ್ರರೊಂದಿಗೆ ಪ್ರತಿ ವಾರ ಗೂಗಲ್ ಮೀಟ್ ಸಭೆಗಳನ್ನು ನಡೆಸಲಾಗಿದೆ. ಪ್ರತಿ ವಾರ ಸಭೆಯಲ್ಲಿ ಮಂಗ್ಳೂರ ವಿಜಯ ಅವರು ಸಮಕಾಲೀನ ವಿಷಯಗಳ ಬಗ್ಗೆ ಮತ್ತು ಸಮಾಜವಾದಿ ಆಂದೋಲನದ ಇತಿಹಾಸದ ಬಗ್ಗೆ ವಿಚಾರ ಮಂಡನೆಯಾಗಿದೆ. ಈ ಸಭೆಯಲ್ಲಿ ನಿರಂತರವಾಗಿ ಬರುವವರನ್ನು ಗುರುತಿಸುವ ಕೆಲಸ ನಡೆದಿದೆ. 'ಕೆಲವರು ಒಂದೆರಡು ಸಭೆಗೆ ಬರುತ್ತಾರೆ; ನಂತರ ಬರುವುದಿಲ್ಲ. ಅಂಥವರಿಗೆ, ಇಂಥ ಸಭೆಗಳಲ್ಲಿ ಅನೇಕ ವಿಷಯಗಳನ್ನು ಆಳವಾಗಿ ತಿಳಿದುಕೊಳ್ಳುವ ಅವಕಾಶ ಇರುತ್ತದೆ; ನಿರಂತರವಾಗಿ ಬನ್ನಿ' ಎಂದು ಮನವೊಲಿಸುವ ಪ್ರಯತ್ನಗಳು ನಡೆದವು.

ಪ್ರತಿವಾರ ನಡೆಯುವ ಗೂಗಲ್ ಮೀಟ್ ಸಭೆಯಲ್ಲಿ ಸಮಾಜವಾದಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಮಂಗ್ಳೂರ ವಿಜಯ ಅವರು ತಿಳಿಸಿಕೊಟ್ಟರು.

**ಮಾರ್ಚ್**


ಹಾವೇರಿ ನಗರದಲ್ಲಿರುವ ಅಲ್ಪಸಂಖ್ಯಾತರ ಮಾದರಿ ನವೋದಯ ವಸತಿ ಶಾಲೆಯ ಮಕ್ಕಳಿಗೆ ಮಾರ್ಚ್ ತಿಂಗಳ 'ಪ್ರಮುಖ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳು' ಎಂಬ ಎಂಟು ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು. ಒಟ್ಟು ಎಂಟು ಮಕ್ಕಳಿಂದ ಒಂದೊಂದು ವಿಷಯದ ಕಾರ್ಡ್‌ಗಳನ್ನು ಓದಿಸಲಾಯಿತು. ಆ ಬಗ್ಗೆ ಅವರಿಗೆ ಹೆಚ್ಚಿನ ಮಾಹಿತಿಯನ್ನು ನೀಡಲಾಯಿತು. ಇದರಲ್ಲಿ 25 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಣೆಬೆನ್ನೂರು ತಾಲ್ಲೂಕಿನ ಹಿರೇಬಿದರಿ ಎಂಬ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ 'ಪ್ರಮುಖ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳು' ಎಂಬ ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು.

ಇಲ್ಲಿನ ಶಿಕ್ಷಕಿ ಶ್ರೀಮತಿ ಸರೋಜಿನಿ ಅವರು ಕರ್ನಾಟಕ ಸಮಾಜವಾದಿ ವೇದಿಕೆ ಪ್ರತಿ ವಾರ ನಡೆಸುವ ಸಭೆಗೆ ಹಾಜರಾಗುತ್ತಾ ಬಂದವರು. ಇವರು ಈ ಕಾರ್ಡ್‌ಗಳಲ್ಲಿನ ವಿಷಯ ಆಧಾರದಲ್ಲಿ ಮಕ್ಕಳಿಗೆ ಚಿಕ್ಕ ಪ್ರಶ್ನೆ, ಕವನ, ಕಿರುಪ್ರಬಂಧ ಬರೆಸಿದರು.

21–3–2021ರಂದು ಹಾವೇರಿ ನಗರದಲ್ಲಿ 'ರೈತರ ಮಹಾ ಪಂಚಾಯತ್' ನಡೆಯಿತು. ದೆಹಲಿಯಲ್ಲಿ ರೈತರು ನಡೆಸಿದ್ದ ಹೋರಾಟವನ್ನು ಬೆಂಬಲಿಸುವುದು ಈ ಪಂಚಾಯತ್‌ನ ಉದ್ದೇಶವಾಗಿತ್ತು.

ಕರ್ನಾಟಕ ಸಮಾಜವಾದಿ ವೇದಿಕೆ ರೈತರ ಹೋರಾಟವನ್ನು ಬೆಂಬಲಿಸಿತು. ಅದರಂತೆ, ಕರ್ನಾಟಕ ಸಮಾಜವಾದಿ ವೇದಿಕೆಯ ಹಾವೇರಿ ಜಿಲ್ಲಾ ಶಾಖೆ, ಒಂದು ಪುಟ್ಟ ಕರಪತ್ರವನ್ನು ಮುದ್ರಿಸಿ, ಅದನ್ನು ರೈತ ಮಹಾ ಪಂಚಾಯತ್‌ಗೆ ಬಂದಿದ್ದ ಎಲ್ಲಾ ರೈತರಿಗೆ ಮತ್ತು ಸಾರ್ವಜನಿಕರಿಗೆ ವಿತರಣೆ ಮಾಡಿ, ರೈತರ ಹೋರಾಟಕ್ಕೆ ತನ್ನ ಬೆಂಬಲವನ್ನು ಸೂಚಿಸಿತು. ಅಲ್ಲಿ ಕೆಲವೊಂದು ಪುಸ್ತಕಗಳನ್ನೂ ಮಾರಾಟ ಮಾಡಲಾಯಿತು.



ಮಾಹಿತಿ ಹಕ್ಕು ಅಧಿನಿಯಮ - 2005 ಅನ್ವಯ

ಇವರಿಗೆ
ಸಾರ್ವಜನಿಕ ಮಾಹಿತಿ ಅಧಿಕಾರಿ (P.I.O.)
ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಕಾರ್ಯಾಲಯ ಹಾವೇರಿ
ಜಿಲ್ಲಾಡಳಿತ ಭವನ - ಹಾವೇರಿ ಜಿಲ್ಲೆ

ಇಂದ
ಕರಿಬಸಪ್ಪ ಎಂ. S/o ಶಿವಪುತ್ರಪ್ಪ C/o ಸಂಗಣ್ಣ ಸಾವಕ್ಕನವರ, 3ನೇ ಕ್ರಾಸ್, ಮಂಜುನಾಥ ನಗರ - ಹಾವೇರಿ.

ಮಾನ್ಯರೇ:
ವಿಷಯ: ಮಾಹಿತಿ ಹಕ್ಕು ಅಧಿನಿಯಮ-2005ರ ನಿಯಮ 6(1) 7(1)ರ ಅಡಿಯಲ್ಲಿ ಅರ್ಜಿ

ಕರಿಬಸಪ್ಪ ಎಂ. S/o ಶಿವಪುತ್ರಪ್ಪ ಹಾವೇರಿ ನಗರದ ನಿವಾಸಿಯಾಗಿದ್ದು ಸಾಮಾಜಿಕ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸುತ್ತೇನೆ. ಹಾಗಾಗಿ ಈ ಕೆಳಕಂಡ ಮಾಹಿತಿ ನೀಡಲು ಮನವಿ.

(1) ಹಾವೇರಿ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕಿನವರ ಅಂತರ್‌ಜಾತಿ ವಿವಾಹವಾದವರ, ಹೆಸರು ವಿಳಾಸ, ಗಳ ಪಟ್ಟಿಯನ್ನು ಕೊಡಿ.
[2005 ರಿಂದ 2021 ಜನವರಿವರೆಗೂ]

ಸ್ವೀಕೃತಿ ಸಹಾಯಕರು
ಉ.ನಿ.ಸ.ಕ.ಇ. ಹಾವೇರಿ.
ದಿನಾಂಕ: 25-2-21

ಧನ್ಯವಾದಗಳು,
ಅರ್ಜಿದಾರರ ಸಹಿ
(ಕರಿಬಸಪ್ಪ.ಎಂ.)

ದಿನಾಂಕ: 25-2-2021
ಸ್ಥಳ: ಹಾವೇರಿ

ಲಗತ್ತು: (1) ಭಾರತೀಯ ಪೋಸ್ಟಲ್ ಆರ್ಡರ್ 10/-ರೂಗಳ ಲಗತ್ತಿಸಿದೆ.

ಅಂತರಜಾತಿ ವಿವಾಹಿತರ ಮಾಹಿತಿಗಾಗಿ ಸಲ್ಲಿಸಿದ ಆರ್.ಟಿ.ಐ. ಅರ್ಜಿ



ಅಲ್ಪಸಂಖ್ಯಾತರ ಮಾದರಿ ನವೋದಯ ವಸತಿ ಶಾಲೆಯ ಮಕ್ಕಳಿಗೆ 'ಪ್ರಮುಖ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳು' ಕುರಿತ ಕಾರ್ಡ್‌ಗಳ ವಿತರಣೆ

22–3–2021ರಂದು ಹಾವೇರಿ ತಾಲ್ಲೂಕಿನ ಕಮದೋಡ ಗ್ರಾಮದ ಶ್ರೀ ಬಿ.ಆರ್.ಅಂಬೇಡ್ಕರ್ ಪ್ರೌಢಶಾಲೆ ಶಿಕ್ಷಕಿ ಶ್ರೀಮತಿ ರೇಣುಕಾ, ಕರ್ನಾಟಕ ಸಮಾಜವಾದಿ ವೇದಿಕೆ ಹಾವೇರಿ ಜಿಲ್ಲಾ ಶಾಖೆ ಪ್ರತಿವಾರ ನಡೆಸುವ ಸಭೆಗೆ ನಿಯತವಾಗಿ ಬರುವವರು. ಅವರ ಸಹಕಾರದೊಂದಿಗೆ ಅವರ ಶಾಲೆಯ ಮಕ್ಕಳಿಗೆ 'ಪ್ರಮುಖ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳು' ಎಂಬ ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು. ಕಾರ್ಡ್‌ಗಳಲ್ಲಿ ಇರುವ ಮಾಹಿತಿಯನ್ನು ಮಕ್ಕಳಿಂದ ಓದಿಸಲಾಯಿತು.

ಪ್ರತಿವಾರ ನಡೆಯುವ ಗೂಗಲ್ ಮೀಟ್ ಸಭೆ ಮಾರ್ಚ್ ತಿಂಗಳಲ್ಲೂ ಮುಂದುವರೆಯಿತು. ಸಮಾಜವಾದಿ ನಾಯಕರ ಬಗ್ಗೆ, ಸಮಾಜದಲ್ಲಿ ವೈಜ್ಞಾನಿಕ ಚಿಂತನೆಯನ್ನು ಬೇರೂರಿಸುವ ಬಗ್ಗೆ ಚರ್ಚಿಸಲಾಯಿತು.

**ಏಪ್ರಿಲ್**

ಹಾವೇರಿ ನಗರದ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜ್ ಪ್ರಿನ್ಸಿಪಾಲರನ್ನು ಭೇಟಿ ಮಾಡಿ, ಡಾ॥ ರಾಮ ಮನೋಹರ ಲೋಹಿಯಾ ಜನ್ಮದಿನ ಪ್ರಯುಕ್ತ, ಹೊರಡಿಸಿರುವ ಪುಸ್ತಕದ ಬಿಡುಗಡೆ ಮತ್ತು ಲೋಹಿಯಾ ವಿಚಾರ ಕಾರ್ಯಕ್ರಮ ಹಮ್ಮಿಕೊಳ್ಳಲು ಸಹಯೋಗ ನೀಡುವಂತೆ ಕೋರಲಾಯಿತು.

ಅವರ ಅನುಮತಿ ದೊರೆತಾಗ ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ರವಿ ಸಾದರ್ ಅವರ ಸಹಕಾರದೊಂದಿಗೆ ಕಾರ್ಯಕ್ರಮವನ್ನು ನಡೆಸಲಾಯಿತು. ಅಲ್ಲಿನ ವಿದ್ಯಾರ್ಥಿನಿಯರಿಗೂ 'ಪ್ರಮುಖ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳು' ಎಂಬ ಕಾರ್ಡ್‌ಗಳನ್ನು ಮತ್ತು ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಅಂದಿನ ಕಾರ್ಯಕ್ರಮಕ್ಕೆ ಕರ್ನಾಟಕ ಸಮಾಜವಾದಿ ವೇದಿಕೆಯ ಹಾವೇರಿ ಜಿಲ್ಲಾ ಶಾಖೆಯ ಇನ್ನೊಬ್ಬ ಸಕ್ರಿಯ ಸದಸ್ಯರಾದ ಶ್ರೀ ರಿಯಾಜ್ ಅಹ್ಮದ್ ಕುಂದಗೋಳ್ ಅವರು ಕೂಡ ಬಂದಿದ್ದರು. ಕಾರ್ಯಕ್ರಮದಲ್ಲಿ 92 ವಿದ್ಯಾರ್ಥಿನಿಯರು ಮತ್ತು ಮೂವರು ಉಪನ್ಯಾಸಕರುಗಳು ಭಾಗವಹಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳ ಯುವಜನರೇ ಅಧಿಕ ಸಂಖ್ಯೆಯಲ್ಲಿ ಭಾಗವಹಿಸುವ '7ಪಿಎಂ ಸಭೆ' ಗೂಗಲ್ ಮೀಟ್ ಪ್ರತಿವಾರ ನಡೆಯುತ್ತದೆ. ಇದರಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ, ಹಾವೇರಿ ಜಿಲ್ಲಾ ಶಾಖೆ ಸಂಚಾಲಕ ಕರಿಬಸಪ್ಪ ಎಂ. ನಿಯತವಾಗಿ ಭಾಗವಹಿಸಿದರು.



ಕರ್ನಾಟಕ ಸಮಾಜವಾದಿ ವೇದಿಕೆ ಹಾವೇರಿ ಸಂಚಾಲಕ ಕರಿಬಸಪ್ಪ ಜೊತೆಗೆ ರೈತ ಸಂಘದ ಮುಖಂಡರು



'ರಾಷ್ಟ್ರೀಯ/ಅಂತರ ರಾಷ್ಟ್ರೀಯ ಮಹತ್ವದ ದಿನಗಳ ಕಾರ್ಡ್'ಗಳನ್ನು ಪಡೆದ ವಿದ್ಯಾರ್ಥಿಗಳು

ಸರ್ಕಾರಿ ಉರ್ದು ಶಾಲೆಯಲ್ಲಿ ಬಾಬಾಸಾಹೇಬ್ ಡಾ॥ ಬಿ.ಆರ್.ಅಂಬೇಡ್ಕರರ ಜನ್ಮದಿನಾಚರಣೆ ನಡೆದಾಗ, ಅದರಲ್ಲಿ ಭಾಗವಹಿಸಲಾಯಿತು.

ಹಾವೇರಿ ನಗರದ ಸರ್ಕಾರಿ ಬಾಲಕಿಯರ ಪ.ಪೂರ್ವ ಕಾಲೇಜಿನಲ್ಲಿ ಏಪ್ರಿಲ್ ತಿಂಗಳ 'ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಹತ್ವದ ದಿನಗಳ ಕಾರ್ಡ್'ಗಳನ್ನು 65 ವಿದ್ಯಾರ್ಥಿನಿಯರಿಗೆ ನೀಡಲಾಯಿತು. ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ಕೂಡ ಒದಗಿಸಲಾಯಿತು.

'ವಿಶ್ವ ಪುಸ್ತಕ ದಿನ'ದ ಅಂಗವಾಗಿ, ಕರ್ನಾಟಕ ಸಮಾಜವಾದಿ ವೇದಿಕೆಯ ಹಾವೇರಿ ಜಿಲ್ಲಾ ಶಾಖೆಯ ಸದಸ್ಯರಾದ ಗುಡ್ಡಪ್ಪ ಅವರು ತಮ್ಮ ಸಂಜೆಯ ಟ್ಯೂಷನ್ ಕ್ಲಾಸ್ ಮಕ್ಕಳಿಗೆ ಮಾಸ್ಕ್‌ಗಳನ್ನು ವಿತರಿಸಿದರು.

ಜಿಲ್ಲೆಯಲ್ಲಿ ಪ್ರಗತಿಪರ ವ್ಯಕ್ತಿಗಳ ಬಗ್ಗೆ ಮಾಹಿತಿ ಪಡೆದು, ಅವರಿಗೆ ಕರ್ನಾಟಕ ಸಮಾಜವಾದಿ ವೇದಿಕೆ ಬಗ್ಗೆ ಮಾಹಿತಿ ಇರುವ ಕರಪತ್ರಗಳನ್ನು, ಕಿರುಪುಸ್ತಕಗಳನ್ನು ಮತ್ತು ಫೋಲ್ಡರ್‌ಗಳನ್ನು ನೀಡುವ ಕೆಲಸವನ್ನು ಮುಂದುವರೆಸಲಾಯಿತು.

**ಮೇ–ಜೂನ್**

ಪ್ರತಿ ಭಾನುವಾರ ನಡೆಸಿದ ಸಭೆಗಳಲ್ಲಿ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾ ಮಟ್ಟದ ಪದಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿದರು.

'ಯುವ ಧ್ವನಿ' ಪತ್ರಿಕೆಯನ್ನು ಇಲ್ಲಿನ ಆಸಕ್ತರಿಗೆ ಪ್ರತಿ ತಿಂಗಳೂ ಹಂಚಲಾಯಿತು.

ಕೊವಿಡ್ ಸಂಕಷ್ಟಕ್ಕೆ ಸಿಲುಕಿದ ಅಸಂಘಟಿತ ವಲಯದ ಕಾರ್ಮಿಕರಿಗೆ ದಾನಿಗಳ ನೆರವು ಪಡೆದು ಆಹಾರ ಕಿಟ್ ಮತ್ತು ದಿನಸಿ ಸಾಮಾನುಗಳ ಕಿಟ್ ವಿತರಣೆ ಮಾಡುವ ಕಾರ್ಯದಲ್ಲಿ ಎರಡೂ ತಿಂಗಳು ಹೆಚ್ಚಿನ ಅವಧಿಗೆ ತೊಡಗಿ, ನೊಂದವರ ಕಣ್ಣೀರು ಒಎರಸುವ ಕಾರ್ಯ ನಿರ್ವಹಿಸಲಾಯಿತು. ■



ಹಿರೇಬಿದರಿ ಸರ್ಕಾರಿ ಶಾಲೆ ಮಕ್ಕಳಿಗೆ 'ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಗಳು' ಕಾರ್ಡ್‌ಗಳ ವಿತರಣೆ ಶಿಕ್ಷಕಿ ಶ್ರೀಮತಿ ಸರೋಜಿನಿ ಅವರೊಂದಿಗೆ ಮಕ್ಕಳು

## ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಜಿಲ್ಲಾ ಶಾಖೆ
## 2021 ಜನವರಿ– ಜೂನ್ ಅವಧಿಯ ವರದಿ

ಕಳೆದ ವರ್ಷದ ನಾಲ್ಕು ತಿಂಗಳಲ್ಲಿ ಅಂದರೆ 2020ರ ಸೆಪ್ಟೆಂಬರ್ ತಿಂಗಳಿಂದ ಡಿಸೆಂಬರ್‌ವರೆಗೆ ನಡೆಸಿಕೊಂಡು ಬಂದಿದ್ದಂತೆ, ಪ್ರತಿ ಶುಕ್ರವಾರ ಮಧ್ಯಾಹ್ನ 3ಗಂಟೆಗೆ ಮಂಡ್ಯ ಜಿಲ್ಲಾ ಸಮಾಜವಾದಿ ವೇದಿಕೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳ ಜೊತೆಗೆ ಕಾನ್‌ಫರೆನ್ಸ್ ಕಾಲ್ ಮೂಲಕ ಸಭೆ ನಡೆಸುವುದನ್ನು ಮುಂದುವರೆಸಲಾಯಿತು.

**ಜನೆವರಿ**

ಜನೆವರಿ 2ರಂದು ನಡೆದ ಸಭೆಯಲ್ಲಿ ಏಳು ಜನರು ಭಾಗಿ ಆಗಿದ್ದರು. ಇತ್ತೀಚೆಗೆ ನಡೆದ ಗ್ರಾಮ ಪಂಚಾಯತ್ ಚುನಾವಣೆಗೆ ಸಂಬಂಧಿಸಿದ ಮಾಹಿತಿಯನ್ನು ಸಭೆಯಲ್ಲಿ ಚರ್ಚಿಸಲಾಯಿತು. ಒಂದು ತಾಲ್ಲೂಕಿನಲ್ಲಿನ ಗ್ರಾಮ ಪಂಚಾಯತ್‌ಗಳಿಗೆ ಚುನಾಯಿತ ರಾದ ಮಹಿಳಾ ಸದಸ್ಯರಿಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸುವುದು ಸೂಕ್ತ ಎಂಬ ವಿಷಯ ಚರ್ಚೆಗೆ ಬಂದಿತು.

ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು, ಸಮಾಜ ಕಲ್ಯಾಣ ಇಲಾಖೆಯಿಂದ ಉತ್ತೇಜನ ಪುರಸ್ಕಾರ ಪಡೆದವರ ಮಾಹಿತಿ ಸಂಗ್ರಹಿಸಿ, ಅವರನ್ನು ಸನ್ಮಾನಿಸುವ ಮತ್ತು ಅವರಿಗೆ ಸಮಾಜವಾದಿ ವೇದಿಕೆಯನ್ನು ಪರಿಚಯಿಸುವ ವಿಷಯವನ್ನು ಚರ್ಚೆ ಮಾಡಲಾಯಿತು.

12ರಂದು ನಡೆಸಿದ ಸಭೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಥವಾ ಒಂದು ತಾಲ್ಲೂಕಿನಲ್ಲಿ ಬರುವ ಗ್ರಾಮ ಪಂಚಾಯತ್‌ಗಳಿಗೆ ಚುನಾಯಿತರಾಗಿರುವವರಲ್ಲಿ ಅಥವಾ ಸೋಲು ಕಂಡಿರುವವರಲ್ಲಿ ಸಮಾಜಮುಖಿ ಮನೋಭಾವ ಇರುವವರನ್ನು ಗುರುತಿಸುವ ಬಗ್ಗೆ ಚರ್ಚಿಸಲಾಯಿತು. ಇವರ ಜೊತೆಗೆ ಸಮಾಜವಾದಿ ವೇದಿಕೆ ಪರವಾಗಿ ಚರ್ಚಿಸುವ ಅವಕಾಶವನ್ನು ರೂಪಿಸಿಕೊಳ್ಳಲು ನಿರ್ಧಾರ ಮಾಡಲಾಯಿತು.

16ರಂದು ಮಂಡ್ಯ ಸಮಾಜವಾದಿ ವೇದಿಕೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳ ಸಭೆಯನ್ನು ಮಂಡ್ಯ ನಗರದ ಸುಶೀಲಮ್ಮ ಪಾರ್ಕಿನಲ್ಲಿ ನಡೆಸಲಾಯಿತು. ದಿನಾಂಕ 24ರಂದು ನಿಗದಿಯಾಗಿದ್ದ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆಗಳ ಬಗ್ಗೆ ಹಾಗೂ ಮಂಡ್ಯ ವೇದಿಕೆಯನ್ನು ಬಲಪಡಿಸುವ ಬಗ್ಗೆ ಚರ್ಚಿಸಲಾಯಿತು.

24ರಂದು 'ರಾಷ್ಟ್ರೀಯ ಹೆಣ್ಣು ಶಿಶು ರಕ್ಷಣಾ ದಿನ ಮತ್ತು ಅಕ್ಷರಮಾತೆ ಸಾವಿತ್ರಿಬಾಯಿ ಫುಲೆ ಜನ್ಮದಿನ ಆಚರಣೆ' ಕಾರ್ಯಕ್ರಮ ನಡೆಸಲಾಯಿತು.

25ರಂದು ಸರ್ವೋದಯ ಕಾಲೇಜ್, ಕೊಪ್ಪ ಇಲ್ಲಿ 'ಸಾವಿತ್ರಿ ಬಾಯಿ ಫುಲೆ ಮತ್ತು ಅಂತರರಾಷ್ಟ್ರೀಯ ಹೆಣ್ಣು ಶಿಶು ರಕ್ಷಣಾ ದಿನ' ಕಾರ್ಯಕ್ರಮ ನಡೆಸಲಾಯಿತು. ಅಲ್ಲಿ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಕಾರ್ಡ್‌ಗಳನ್ನು ನೀಡಲಾಯಿತು.

26ರಂದು ಸರ್ಕಾರಿ ಪ್ರಾಥಮಿಕ ಶಾಲೆ, ಕೊಪ್ಪ ಇಲ್ಲಿ ಸಂವಿಧಾನ ಪೀಠಿಕೆ ಕಾರ್ಡ್‌ಗಳನ್ನು ವಿತರಿಸಲಾಯಿತು ಮತ್ತು ಅಲ್ಲಿನ ಶಿಕ್ಷಕರೊಂದಿಗೆ ಸಂವಿಧಾನ ಕುರಿತು ಚರ್ಚಿಸಲಾಯಿತು.

ಜನೆವರಿ 30 ಸರ್ವೋದಯ ದಿನ. ಮಂಡ್ಯ ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ 'ಗಾಂಧಿ ಹತಾತ್ಮ ದಿನ ಮತ್ತು ಸರ್ವೋದಯ ದಿನ' ಪ್ರಯುಕ್ತ ಕಾರ್ಯಕ್ರಮವನ್ನು ನಡೆಸಲಾಯಿತು. ಕಾಲೇಜಿನ ನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಮತ್ತು ಬೋಧಕ ವರ್ಗ ಪಾಲ್ಗೊಂಡಿದ್ದರು.

**ಫೆಬ್ರುವರಿ**

6ರಂದು ಮಂಡ್ಯ ಸಮಾಜವಾದಿ ವೇದಿಕೆಯ ಕಾರ್ಯಕಾರಿ ಸಮಿತಿ ಸದಸ್ಯರುಗಳ ಜೊತೆಗೆ ಕಾನ್‌ಫರೆನ್ಸ್ ಕಾಲ್ ಏರ್ಪಡಿಸ ಲಾಗಿತ್ತು. ಈ ಸಭೆಗೆ ಮಂಗ್ಳೂರ ವಿಜಯ ಅವರು ಸೇರಿಕೊಂಡು, ಫೆಬ್ರುವರಿ ತಿಂಗಳಲ್ಲಿ ಬರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಇರುವ ಕಾರ್ಡ್‌ಗಳನ್ನು ಪ್ರಸಾರ ಮಾಡುವ ವಿಷಯ ಕುರಿತು ಚರ್ಚಿಸಲಾಯಿತು.

10ರಂದು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ತಗ್ಗಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಫೆಬ್ರುವರಿ ತಿಂಗಳಲ್ಲಿ ಬರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಇರುವ ಕಾರ್ಡ್‌ಗಳನ್ನು ವಿತರಿಸಲಾಯಿತು. ಮತ್ತು ಕಾರ್ಡ್‌ಗಳಲ್ಲಿ ಇದ್ದ ಮಾಹಿತಿಯನ್ನು ಮಕ್ಕಳಿಂದ ಓದಿಸ ಲಾಯಿತು.

ಅದೇ ದಿನ, ಕೊಪ್ಪ ಸರ್ಕಾರಿ ಮಹಿಳಾ ಸರ್ಕಾರಿ ಕಾಲೇಜಿ ನಲ್ಲೂ ಕಾರ್ಡ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು ಮತ್ತು ಅವರಿಂದ ಫೆಬ್ರುವರಿ ತಿಂಗಳಲ್ಲಿ ಬರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಇರುವ ಕಾರ್ಡ್‌ಗಳಲ್ಲಿ ಇದ್ದ ಮಾಹಿತಿಯನ್ನು ಓದಿಸಲಾಯಿತು.

15ರಂದು ಕಾಡುಕೊತ್ತನಹಳ್ಳಿಯ ಡಾ॥ ಅಂಬೇಡ್ಕರ್ ಪ್ರೌಢ ಶಾಲೆಯ ಮಕ್ಕಳಿಗೆ ಫೆಬ್ರುವರಿ ಕಾರ್ಡ್‌ಗಳನ್ನು ವಿತರಿಸಿ, ಫೆಬ್ರುವರಿ ತಿಂಗಳಲ್ಲಿ ಬರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಇರುವ ಕಾರ್ಡ್‌ಗಳಲ್ಲಿ ಇದ್ದ ಮಾಹಿತಿಯನ್ನು ತಿಳಿಸಲಾಯಿತು.

19ರಂದು ನಾಗಮಂಗಲ ತಾಲ್ಲೂಕಿನ ಹೊಸಕೆರೆ ಮತ್ತು ಚಿಣ್ಯ ಗ್ರಾಮ ಪಂಚಾಯತ್ ಸದಸ್ಯರಿಗಾಗಿ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ ಚಟುಟಿಕೆ ಗಳನ್ನು ತಿಳಿಸಿ, ಸಂವಿಧಾನ ಕಾರ್ಡ್‌ಗಳನ್ನು ನೀಡಲಾಯಿತು.

ನಾಗಮಂಗಲ ಪಟ್ಟಣದ ಕೆ.ಎನ್.ಎಸ್. ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಫೆಬ್ರುವರಿ 25ರಂದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಕಾರ್ಡ್‌ಗಳನ್ನು ನೀಡಲಾಯಿತು.

**ಏಪ್ರಿಲ್ ತಿಂಗಳ ಚಟುವಟಿಕೆಗಳು**

19ರಂದು ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯತ್ ಸದಸ್ಯರುಗಳಿಗೆ 2ನೇ ಬ್ಯಾಚ್ ತರಬೇತಿ ಶಿಬಿರ ನಡೆದಿತ್ತು. ಅಲ್ಲಿಗೆ ಹೋಗಿ, ಏಪ್ರಿಲ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸ ಲಾಗಿದ್ದ ಕಾರ್ಡ್‌ಗಳನ್ನು ವಿತರಿಸ ಲಾಯಿತು ಮತ್ತು ಕಾರ್ಡ್‌ಗಳಲ್ಲಿದ್ದ ವಿಷಯದ ಮುಖ್ಯಾಂಶಗಳನ್ನು ತಿಳಿಸ ಲಾಯಿತು.



ಏಪ್ರಿಲ್ 4ರಂದು ಮಂಡ್ಯ ನಗರದ ಗಾಂಧಿಭವನದಲ್ಲಿ ಡಾ॥ ರಾಮಮನೋಹರ ಲೋಹಿಯಾ ಜನ್ಮ ದಿನಾಚರಣೆ ಪ್ರಯುಕ್ತ ಕಾರ್ಯಕ್ರಮ ನಡೆಸಲಾಯಿತು. ಲೋಹಿಯಾ ಕುರಿತು ಒದಗಿಸಲಾದ ಪುಸ್ತಕಗಳನ್ನು ಸಭಿಕರಿಗೆ ನೀಡಲಾಯಿತು.

28ರಂದು ಬೆಸಗರಹಳ್ಳಿ, ಕೊಪ್ಪ, ಹುರುಗಲವಾಡಿ ಮತ್ತು ಕೆಳಘಟ್ಟ ಗ್ರಾಮಗಳಲ್ಲಿ ಕೊರೊನಾ ಕುರಿತು ಜಾಗೃತಿ ಮೂಡಿಸಲಾಯಿತು. ನೆಲದ ಸಿರಿ ಟ್ರಸ್ಟ್‌ನವರು ಮುದ್ರಿಸಿದ್ದ ಕರಪತ್ರ ಗಳನ್ನು ಹಂಚಲಾಯಿತು.

29ರಂದು ತೆಗ್ಗಹಳ್ಳಿ ಗ್ರಾಮದ ಪ್ರೌಢಶಾಲಾ ಮಕ್ಕಳಿಗೆ ಸಂವಿಧಾನ ಕಾರ್ಡ್‌ಗಳನ್ನು ವಿತರಣೆ ಮಾಡಿ, ಸಂವಿಧಾನದ ಬಗ್ಗೆ ಚರ್ಚೆ ನಡೆಸಲಾಯಿತು.

30ರಂದು ಹುರುಗಲವಾಡಿ ಗ್ರಾಮದ ಪ್ರೌಢಶಾಲಾ ಮಕ್ಕಳಿಗೆ ಸಂವಿಧಾನ ಕಾರ್ಡ್‌ಗಳನ್ನು ಮತ್ತು ಏಪ್ರಿಲ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್‌ಗಳನ್ನು ವಿತರಿಸಲಾಯಿತು. ಅವರೊಂದಿಗೆ ಸಂವಿಧಾನ ಕುರಿತು ವಿಚಾರ ವಿನಿಮಯ ಮಾಡಲಾಯಿತು. ■



**ಏಪ್ರಿಲ್ 4ರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಭಿಕರು**

**ಮಾರ್ಚ್**

ಮಾರ್ಚ್ ತಿಂಗಳಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಮಹತ್ವ ತಿಳಿಸುವ ಕಾರ್ಡ್‌ಗಳನ್ನು ವಿತರಿಸುವ ಬಗ್ಗೆ 1ನೇ ತಾರೀಖು ನಡೆಸಿದ ಸಭೆಯಲ್ಲಿ ಚರ್ಚಿಸಲಾಯಿತು. ಭಗತ್ ಸಿಂಗ್ ಮತ್ತು ಲೋಹಿಯಾ ಅವರ ಚಿಂತನೆ–ಹೋರಾಟ ಕುರಿತು ವಿಚಾರ ವಿನಿಮಯ ಮಾಡಲಾಯಿತು.

23ರಂದು ಡಾ॥ ಲೋಹಿಯಾ ಜನ್ಮದಿನ ಬರಲಿರುವ ಪ್ರಯುಕ್ತ, ಆ ವಿಷಯದಲ್ಲಿ ಮಂಡ್ಯದಲ್ಲಿ ಒಂದು ಕಾರ್ಯಕ್ರಮ ನಡೆಸುವ ಬಗ್ಗೆ ಚರ್ಚಿಸಲಾಯಿತು.

6ರಂದು ಸಭೆ ನಡೆಸಿ, ಮಂಡ್ಯ ಸಮಾಜವಾದಿ ವೇದಿಕೆ ಕಾರ್ಯಕಾರಿ ಸಮಿತಿ ಸದಸ್ಯರ ಜವಾಬ್ದಾರಿ ಮತ್ತು ವೇದಿಕೆ ಚಟುವಟಿಕೆಗಳನ್ನು ತಾಲ್ಲೂಕುಗಳಲ್ಲಿ ವಿಸ್ತರಿಸುವ ಬಗ್ಗೆ ಚರ್ಚೆ ನಡೆಸಲಾಯಿತು.

ಕಾರ್ಡ್‌ಗಳನ್ನು ವಿತರಿಸುವ ಕಾರ್ಯಕ್ರಮದ ಬಳಿಕ, ಆಯಾ ಶಾಲೆ, ಕಾಲೇಜು ಅಧ್ಯಾಪಕರನ್ನು ಸಮಾಜವಾದಿ ವೇದಿಕೆಗೆ ಸದಸ್ಯರನ್ನಾಗಿ ಮಾಡಿಕೊಳ್ಳುವುದು ಸೂಕ್ತ ಎಂಬ ಅಂಶ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

10ರಂದು ಮಂಡ್ಯ ಕಂಪ್ಯೂಟರ್ ಮತ್ತು ಇಂಗ್ಲೀಷ್ ಅಕಾಡೆಮಿ



ಕರ್ನಾಟಕ ಸಮಾಜವಾದಿ ವೇದಿಕೆ
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ
ಮಂಡ್ಯ ಜಿಲ್ಲೆ.

ಸಮಾಜವಾದಿ ನಾಯಕರಾದ
ಡಾ.ರಾಮಮನೋಹರ ಲೋಹಿಯಾ ಜನ್ಮ ದಿನಾಚರಣೆ

ದಿನಾಂಕ : 04-04-2021 ಬೆಳಿಗ್ಗೆ 10.30ಕ್ಕೆ
ಸ್ಥಳ : ಗಾಂಧಿ ಭವನ, ಮಂಡ್ಯ

ಉದ್ಘಾಟನೆ : ಎಚ್.ಎ.ವೆಂಕಟೇಶ್ ರವರು
ಮಾಜಿ ಅಧ್ಯಕ್ಷರು, ಬಣ್ಣ&ಅರಗು ಕಾರ್ಖಾನೆ, ಮೈಸೂರು

ಪುಷ್ಪಾರ್ಚನೆ : ನಾರಾಯಣ್ ತಿರುಮಲಾಪುರ ರವರು
ಸಮಾಜ ಸೇವಕರು ಮತ್ತು ಸಾಹಿತಿಗಳು

ಅಧ್ಯಕ್ಷತೆ : ಬಿ.ಎಸ್.ಚಂದ್ರಶೇಖರನ್ ರವರು
ನಿ.ಪ್ರಾಂಶುಪಾಲರು ಮತ್ತು ದ.ಚ.ಹಿರಿಯ ಮುಖಂಡರು

ಪ್ರಧಾನ ಭಾಷಣ : ಬಸವರಾಜ್ ಹೂಗಾರ್ ರವರು
ಬರಹಗಾರರು ಮತ್ತು ಸಮಾಜವಾದಿ ಚಿಂತಕರು

ಮುಖ್ಯ ಅತಿಥಿಗಳು : ಎಲ್.ಸಂದೇಶ್ ರವರು, ಅಧ್ಯಕ್ಷರು
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ

ಶ್ರೀಮತಿ ವಿಜಯಲಕ್ಷ್ಮಿ ರಘುನಂದನ್ ರವರು
ಮಾಜಿ ನಗರಸಭಾ ಅಧ್ಯಕ್ಷರು

ಶ್ರೀಮತಿ ಪದ್ಮ ಮೋಹನ್ ರವರು
ಸ್ಫೂರ್ತಿ ಲಯನ್ಸ್ ಅಧ್ಯಕ್ಷರು, ಸಮಾಜ ಸೇವಕರು

ಪ್ರಾಸ್ತಾವಿಕ ನುಡಿ : ಹುರುಗಲವಾಡಿ ರಾಮಯ್ಯ ರವರು
ಗಾಯಕರು & ಸಂಚಾಲಕರು ಸಮಾಜವಾದಿ ವೇದಿಕೆ

ನಿರೂಪಣೆ : ಶ್ರೀಮತಿ ವಸಂತಮ್ಮ ರವರು, ಭಾರತೀನಗರ
ಸ್ವಾಗತ : ಎಂ.ಮಂಚಶೆಟ್ಟಿ ರವರು, ಪ್ರಗತಿಪರರು
ವಂದನಾರ್ಪಣೆ : ಟಿ.ಎಂ.ಸುಂದರೇಶ್ ರವರು
ಮಾಜಿ ಗ್ರಾ.ಪಂ.ಸದಸ್ಯರು, ಸಮಾಜವಾದಿ ವೇದಿಕೆ ತಗ್ಗಹಳ್ಳಿ

ಗಾಯನ : ಹನಿಯಂಬಾಡಿ ಎನ್.ಶೇಖರ್, ಚಾಮನಹಳ್ಳಿ ಮಂಜು ಇತರರು
ಸೂಚನೆ : ಮಾಸ್ಕ್ ಧರಿಸುವುದು, ಅಂತರ ಕಾಡುವುದು, ಸ್ಯಾನಿಟೈಜ್ ಬಳಸುವುದು ಕಡ್ಡಾಯ

ಕಾರ್ಯಕ್ರಮದ ಕರಪತ್ರ



ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರೊ॥ ಚಂದ್ರಶೇಖರನ್

# ಸಮಾಜವಾದಿ ನೆಲೆಗಟ್ಟು ಮುಖ್ಯ

ಸಾಮಾಜಿಕ ಸುಧಾರಣೆ ಮತ್ತು ಸಮಾಜವಾದಿ ನೆಲೆಗಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕಿದ್ದ ರಾಜಕೀಯ ಕ್ಷೇತ್ರ ಇಂದು ಅಪನಂಬಿಕೆ ಮತ್ತು ಅಪಹಾಸ್ಯಕ್ಕೆ ಗುರಿಯಾಗಿರುವುದು ಆತಂಕದ ಸಂಗತಿ' ಎಂದು ರಾಮಮನೋಹರ ಲೋಹಿಯಾ ಜನ್ಮದಿನಾಚರಣೆ ನಿಮಿತ್ತ ಏಪ್ರಿಲ್ 4ರಂದು ಏರ್ಪಾಟಾಗಿದ್ದ ಕಾರ್ಯಕ್ರಮದಲ್ಲಿ ಎಚ್.ಎ. ವೆಂಕಟೇಶ್ ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಕರ್ನಾಟಕ ಸಮಾಜವಾದಿ ವೇದಿಕೆ ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಜಂಟಿಯಾಗಿ ಏಪ್ರಿಲ್ 4ರಂದು ಏರ್ಪಡಿಸಿದ್ದವು.

ರೈತರ ಬಗ್ಗೆ, ಜಾತಿಪದ್ಧತಿ ಬಗ್ಗೆ, ಮಹಿಳೆಯರ ಸಶಕ್ತತೆ ಬಗ್ಗೆ ಲೋಹಿಯಾ ನುಡಿದಿದ್ದ ಮಾತುಗಳನ್ನು ಇಂದು ಎಲ್ಲರೂ ನೆನಪಿಸಿಕೊಳ್ಳಬೇಕಿದೆ ಎಂಬ ಮಾತು ಸಭೆಯಲ್ಲಿ ವ್ಯಕ್ತವಾಯಿತು.

ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಎಲ್. ಸಂದೇಶ್ ಮಾತನಾಡಿ, ಲೋಹಿಯಾ ಅವರಂಥ ಅಪ್ಪಟ ಜಾತ್ಯತೀತ ಮತ್ತು ಸಮಾಜವಾದಿ ನಾಯಕರ ಬಗ್ಗೆ ಇಂದಿನ ಯುವಜನರಿಗೆ ತಿಳಿಸಿ ಕೊಡುವ ಅವಶ್ಯಕತೆ ಇದೆ. ರಾಜಕೀಯದಲ್ಲಿ ಇರುವ ಯುವಜನ ಲೋಹಿಯಾ ಚಿಂತನೆಯನ್ನು ಅರ್ಥಮಾಡಿಕೊಳ್ಳುವುದು ಇಂದಿನ ತುರ್ತು ಎಂದು ತಿಳಿಸಿದರು.

ನಿವೃತ್ತ ಪ್ರಾಂಶುಪಾಲ ಬಿ.ಎಸ್.ಚಂದ್ರಶೇಖರನ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಮಾಜವಾದಿ ವೇದಿಕೆ ಜಿಲ್ಲಾ ಸಂಚಾಲಕ ಹುರುಗಲವಾಡಿ ರಾಮಯ್ಯ ಮತ್ತು ಇತರ ಪದಾಧಿ ಕಾರಿಗಳು ಭಾಗಿಯಾಗಿದ್ದರು. ■

---

ವಿದ್ಯಾರ್ಥಿಗಳಿಗೆ ಮಾರ್ಚ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್‌ಗಳನ್ನು ವಿತರಿಸಲಾಯಿತು ಮತ್ತು ಆ ಕಾರ್ಡ್‌ಗಳಲ್ಲಿ ಇದ್ದ ವಿಷಯವನ್ನು ಓದಿಸಲಾಯಿತು.

19ರಂದು ಗಾಂಧಿ-ಲೋಹಿಯಾ-ಅಂಬೇಡ್ಕರ್ ಹೋರಾಟ ಗಳು ಮತ್ತು ಸ್ವಾತಂತ್ರ್ಯ ಚಳವಳಿ ಕಾಲದಲ್ಲಿ ದುಡಿದ ಸಮಾಜವಾದಿ ಮುಖಂಡರ ಬಗ್ಗೆ ಕಾನ್‌ಫರೆನ್ಸ್ ಕಾಲ್ ಸಭೆಯಲ್ಲಿ ಮಂಗ್ಳೂರ ವಿಜಯ ಅವರಿಂದ ವಿಷಯ ತಿಳಿದುಕೊಳ್ಳಲಾಯಿತು.

22ರಂದು ನಾಗಮಂಗಲ ತಾಲ್ಲೂಕು ದೇವಲಾಪುರ ಗ್ರಾಮದ ಅಂಬೇಡ್ಕರ್ ವಸತಿ ಶಾಲೆಯ ಮಕ್ಕಳಿಗೆ ಮಾರ್ಚ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್‌ಗಳನ್ನು ವಿತರಿಸಲಾಯಿತು.

ನಾಗಮಂಗಲ ತಾಲ್ಲೂಕಿನ ಆಯ್ದ ಗ್ರಾಮ ಪಂಚಾಯತ್ ಸದಸ್ಯರುಗಳ 1ನೇ ಬ್ಯಾಚ್ ಸಭೆಯಲ್ಲಿ ಭಾಗವಹಿಸಲಾಯಿತು. ಅಲ್ಲಿ ಮಾರ್ಚ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್‌ಗಳನ್ನು ವಿತರಿಸಿ, ಆ ದಿನಗಳ ಮಹತ್ವವನ್ನು ವಿವರಿಸಲಾಯಿತು

29ರಂದು ಸಂಜೆ ನಡೆದ ಕಾನ್‌ಫರೆನ್ಸ್ ಕಾಲ್ ಸಭೆಯಲ್ಲಿ ಸಮಾಜವಾದಿ ಆಂದೋಲನ ವಿಷಯ ಕುರಿತ ಮುಂದುವರೆದ ಭಾಗವನ್ನು ಮಂಗ್ಳೂರ ವಿಜಯ ತಿಳಿಸಿದರು.

■



ಮಾರ್ಚ್ 13ರಂದು ಪಾಂಡವಪುರ ತಾಲ್ಲೂಕು ಮೇಲು ಕೋಟೆಯಲ್ಲಿನ ಸರ್ಕಾರಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳಿಗೆ ಮಾರ್ಚ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್ ಗಳನ್ನು ವಿತರಣೆ ಮಾಡಲಾಯಿತು. ಕಾರ್ಡ್‌ನಲ್ಲಿದ್ದ ವಿಷಯ ಕುರಿತು ಚರ್ಚೆಗೆ ಅವಕಾಶ ಒದಗಿಸಲಾಯಿತು.

**ಮೇ**

1ನೇ ತಾರೀಖು ಮೇ ದಿನ ಪ್ರಯುಕ್ತ ಮಂಡ್ಯ ನಗರದಲ್ಲಿ ಕಾರ್ಮಿಕರ ಸಭೆ ನಡೆಸಿ, ಅಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವ ತಿಳಿಸುವ ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು. ಕಾರ್ಮಿಕರಿಗಾಗಿ ಡಾ॥ ಅಂಬೇಡ್ಕರ್ ಕೈಗೊಂಡ ಕ್ರಮಗಳನ್ನು ವಿವರಿಸಲಾಯಿತು.

5ರಂದು ನಾಗಮಂಗಲ ಗ್ರಾಮ ಪಂಚಾಯತ್ ಸದಸ್ಯರ ತರಬೇತಿ ಶಿಬಿರದಲ್ಲಿ ಭಾಗಿಯಾಗಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವ ತಿಳಿಸುವ ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು.

13ರಂದು ಕೊಪ್ಪ ಸಮಾನ ಮನಸ್ಕರ ವೇದಿಕೆ ಸದಸ್ಯರಿಗೆ ಏಪ್ರಿಲ್



ಹೊಸಳ್ಳಿಯಲ್ಲಿ ಕಟ್ಟಡ ನಿರ್ಮಾಣವಾಗುತ್ತಿದ್ದ ಸ್ಥಳದಲ್ಲಿನ ಬಾಲಕರಿಗೆ ಕಾರ್ಡ್ ವಿತರಣೆ

ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್ ಗಳನ್ನು ನೀಡಲಾಯಿತು. ಜೊತೆಗೆ, ಸಂವಿಧಾನ ಕುರಿತ ಕಾರ್ಡ್‌ಗಳನ್ನು ಮತ್ತು ಲೋಹಿಯಾ ಕುರಿತ ಪುಸ್ತಕಗಳನ್ನು ಕೊಟ್ಟು, ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

17ರಂದು ಮಂಡ್ಯ ಹೊಸಳ್ಳಿಯಲ್ಲಿ ಪ್ರೌಢಶಾಲಾ ಮಕ್ಕಳಿಗೆ ಏಪ್ರಿಲ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸ ಲಾಗಿದ್ದ ಕಾರ್ಡ್‌ಗಳನ್ನು ವಿತರಣೆ ಮಾಡಲಾಯಿತು ಮತ್ತು ಚರ್ಚೆ ನಡೆಸಲಾಯಿತು.

17ರಂದು ಹೊಸಳ್ಳಿಯಲ್ಲಿ ಕಟ್ಟಡ ನಿರ್ಮಾಣ ವಾಗುತ್ತಿದ್ದ ಸ್ಥಳದಲ್ಲಿ ಏಳೆಂಟು ಬಾಲಕರನ್ನು ಗುರುತಿಸಿ, ಅವರೊಂದಿಗೆ ಅರ್ಧ ಗಂಟೆ ಮಾತ ನಾಡಿ, ಅವರಿಗೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್‌ಗಳನ್ನು, ಸಂವಿಧಾನದ ಪೀಠಿಕೆ ಇದ್ದ ಕಾರ್ಡ್‌ಗಳನ್ನು ನೀಡಲಾಯಿತು.

18ರಂದು ತೆಗ್ಗಹಳ್ಳಿಯಲ್ಲಿ ಯುವಜನರ ಸಭೆಯನ್ನು ನಡೆಸಲಾಯಿತು. ಇಲ್ಲಿಗೆ ಬಂದಿದ್ದ ವರಿಗೆ ಏಪ್ರಿಲ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್‌ಗಳನ್ನು, ಸಂವಿಧಾನದ

ಪೀಠಿಕೆ ಇರುವ ಕಾರ್ಡ್‌ಗಳನ್ನು ಮತ್ತು 'ಯುವ ಧ್ವನಿ' ಪತ್ರಿಕೆಯ ಪ್ರತಿಗಳನ್ನು ನೀಡಲಾಯಿತು. ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

20ರಂದು ಕೊಪ್ಪ ಪಟ್ಟಣದಲ್ಲಿ ನಡೆದ ರೈತ ಹೋರಾಟಗಾರ ಗದ್ದೆಲಿಂಗೇಗೌಡ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಲಾಯಿತು. ಅಲ್ಲಿ ಏಪ್ರಿಲ್ ತಿಂಗಳಲ್ಲಿನ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ದಿನಗಳ ಬಗ್ಗೆ ಒದಗಿಸಲಾಗಿದ್ದ ಕಾರ್ಡ್‌ಗಳನ್ನು, ಸಂವಿಧಾನದ ಪೀಠಿಕೆ ಇದ್ದ ಕಾರ್ಡ್‌ಗಳನ್ನು ಮತ್ತು 'ಯುವ ಧ್ವನಿ' ಪತ್ರಿಕೆ ಪ್ರತಿಗಳನ್ನು ಹಂಚಲಾಯಿತು.

**ಜೂನ್**

1ನೇ ತಾರೀಖು ಮದ್ದೂರು ತಾಲ್ಲೂಕು ಎನ್.ಎಸ್.ಎಲ್. ಸಕ್ಕರೆ ಕಂಪನಿ ವತಿಯಿಂದ ರೈತರ ಮತ್ತು ಕಾರ್ಮಿಕರ ಹಿತ ರಕ್ಷಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯ ಮಾಡಿ, ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರ ಜೊತೆಗೆ ಸೇರಿ ಹಕ್ಕೊತ್ತಾಯ ಪತ್ರವನ್ನು ನೀಡಲಾಯಿತು.

4ರಂದು ಹುರುಗಲವಾಡಿ ಗ್ರಾಮಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನಾಚರಣೆಯನ್ನು ಮಾಡಲಾಯಿತು. ಬೆಸಗರಹಳ್ಳಿ ಗ್ರಾಮದಲ್ಲಿ ನಡೆದ ಇದೇ ಕಾರ್ಯಕ್ರಮದಲ್ಲಿ ನೆಲದ ಸಿರಿ ಟ್ರಸ್ಟ್ ಪದಾಧಿಗಳ ಜೊತೆಗೆ ಸೇರಲಾಯಿತು.

9ರಂದು ಸಮಾನ ಮನಸ್ಕರ ವೇದಿಕೆ, ಕರ್ನಾಟಕ ರಾಜ್ಯ ರೈತ ಸಂಘ ಕಾರ್ಯಕರ್ತರ ಜೊತೆ ಸೇರಿ, ರೈತ ಮುಖಂಡ ಕೀಳಘಟ್ಟ ನಂಜುಂಡಯ್ಯ ದಂಪತಿ 25ನೇ ವಿವಾಹದಿನ ನೆನಪಿನಲ್ಲಿ ಕೊಪ್ಪ ಪಟ್ಟಣದಲ್ಲಿ 350 ಸಸಿಗಳನ್ನು ವಿತರಣೆ ಮಾಡುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಾಯಿತು.

14 ಮತ್ತು 15ರಂದು ಹುರುಗಲವಾಡಿ ಮತ್ತು ಸುತ್ತಮುತ್ತಲ ನಾಲ್ಕು ಗ್ರಾಮಗಳ 20 ಮಕ್ಕಳಿಗೆ ಹೋರಾಟದ/ಪರಿಸರ/ಮಹಿಳಾ ಗೀತೆಗಳನ್ನು ಕಲಿಸಿ ಕೊಡಲಾಯಿತು.

18 ಮತ್ತು 19ರಂದು ಮೋಟೇಗೌಡ ನಂಜಮ್ಮ ಟ್ರಸ್ಟ್ ಸಹಕಾರ ಪಡೆದುಕೊಂಡು, ದಿನಗೂಲಿ ನಂಬಿ ಜೀವನ ನಡೆಸುತ್ತಿದ್ದ ಕುಟುಂಬಗಳಿಗೆ ಆಹಾರದ ಕಿಟ್ ಮತ್ತು ದಿನಸಿ ಪದಾರ್ಥಗಳ ಕಿಟ್‌ಗಳನ್ನು ವಿತರಣೆ ಮಾಡಲಾಯಿತು.

ಕೊಪ್ಪ ಪಟ್ಟಣದ ಕೃಷಿಕ್ ಗೌಡರ ಸಹಕಾರದೊಂದಿಗೆ ಬಡ ಕಲಾವಿದರಿಗೆ ಆಹಾರ ಕಿಟ್, ದಿನಸಿ ಸಾಮಾನುಗಳನ್ನು ವಿತರಣೆ ಮಾಡ ಲಾಯಿತು.

28ರಂದು ಮಂಡ್ಯ ಜಿಲ್ಲೆಯಾದ್ಯಂತ ನಡೆದ ಉದ್ಯೋಗ ಖಾತ್ರಿ ಯೋಜನೆ ಅಭಿಯಾನ ಕಾರ್ಯಕ್ರಮದಲ್ಲಿ ಕಾರ್ಮಿಕರಿಗೆ ಜಾಬ್ ಕಾರ್ಡ್ ವಿತರಿಸುವುದಕ್ಕೆ ಸಹಕಾರ ನೀಡಲಾಯಿತು. ■



30ರಂದು ಕೊಪ್ಪ ಪಟ್ಟಣದ ಬ್ಯಾಂಕ್ ಆಫ್ ಬರೋಡಾ ಶಾಖೆಯಲ್ಲಿ ಗ್ರಾಹಕರಿಗೆ ಆಗುತ್ತಿದ್ದ ತೊಂದರೆಯನ್ನು ಮತ್ತು ಅನ್ಯಾಯವನ್ನು ವಿವರಿಸಿ, ಬ್ಯಾಂಕ್ ಅಧಿಕಾರಿಗಳಿಗೆ ಮನವಿ ಪತ್ರ ನೀಡಲಾಯಿತು.



12ರಂದು, ಡಾ॥ ಸಿದ್ಧಲಿಂಗಯ್ಯ ಶ್ರದ್ಧಾಂಜಲಿ ಸಭೆಯನ್ನು ಹುರುಗಲವಾಡಿ ಮತ್ತು ಬೆಸಗರಹಳ್ಳಿ ಗ್ರಾಮಗಳಲ್ಲಿ ಏರ್ಪಡಿಸಲಾಯಿತು.



27ರಂದು ಬೆಸಗರಹಳ್ಳಿ ಗ್ರಾಮದಲ್ಲಿ ಶಾಹು ಮಹಾರಾಜ್ ಮತ್ತು ಕೆಂಪೇಗೌಡ ಅವರ ಜಯಂತಿಯನ್ನು ಸರಳವಾಗಿ ಆಚರಣೆ ಮಾಡಲಾಯಿತು.

## 2021ರ ಜನೆವರಿಯಿಂದ ಜೂನ್‌ವರೆಗಿನ ಅರ್ಧ ವರ್ಷದಲ್ಲಿ
## ಕರ್ನಾಟಕ ಸಮಾಜವಾದಿ ವೇದಿಕೆ, ಬೆಂಗಳೂರು ಕೇಂದ್ರ ಕಚೇರಿಯಿಂದ ಮಾಡಲಾದ ವೆಚ್ಚದ ವಿವರಗಳು

| | |
|---|---|
| * 2020ರ ವಾರ್ಷಿಕ ವರದಿಯ 40 ಪ್ರತಿಗಳನ್ನು ಮುದ್ರಿಸಿದ್ದು | ರೂ. 2,000/– |
| * ರಾಯಚೂರು ಜಿಲ್ಲೆಯ ಗಬ್ಬೂರಿನಲ್ಲಿ 'ಭಾಗ್ಯಲಕ್ಷ್ಮಿ' ಯೋಜನೆಗೆ ಹೆಣ್ಣು ಮಕ್ಕಳನ್ನು ಸೇರ್ಪಡೆ ಮಾಡುವ ಕಾರ್ಯದಲ್ಲಿರುವ ನಾಗರತ್ನ ಅವರಿಗೆ ಗೌರವ ಧನ | ರೂ. 500/– |
| * ಕೊವಿಡ್ ಕಾರಣಕ್ಕೆ ಶಾಲೆಯಿಂದ ಹೊರಗೆ ಉಳಿದಿರುವ ಬೆಂಗಳೂರಿನ ದಾನಮ್ಮ ಎಂಬ 4ನೇ ಕ್ಲಾಸ್ ಬಾಲಕಿಗೆ ನೆರವು | ರೂ. 500/– |
| * ರಾಯಚೂರು ಜಿಲ್ಲೆ ಮಾನವಿ ತಾಲ್ಲೂಕಿನ ಕಸ್ತೂರಬಾ ಬಾಲಕಿಯರ ವಸತಿ ಶಾಲೆಯಲ್ಲಿ ಪ್ರವೇಶ ಪಡೆದು, ಕೊವಿಡ್ ಕಾರಣಕ್ಕೆ ಬೆಂಗಳೂರಿನ ಮನೆಗೆ ಬಂದು ಮತ್ತೆ ವಸತಿ ಶಾಲೆಗೆ ಹೋಗಲು ಆರ್ಥಿಕ ತೊಂದರೆ ಎದುರಿಸುತ್ತಿದ್ದ 8ನೇ ತರಗತಿಯ ಬಾಲಕಿ ರೆಹಾನಾಗೆ ನೀಡಲಾದ ನೆರವು | ರೂ. 1,500/– |
| * ಸಮಾಜವಾದಿ ಚಳವಳಿಯಲ್ಲಿ ಮೂರು ದಶಕಗಳ ಕಾಲ ಕೆಲಸ ಮಾಡಿದ್ದ ಆಂಜನೇಯ ಮೈತ್ರಿಕರ್ ಅವರು ಚಿಕಿತ್ಸೆ ಪಡೆದುಕೊಳ್ಳಲು ನೀಡಲಾದ ನೆರವು | ರೂ. 2,000/– |
| * ಕೊವಿಡ್ ಸಂಕಷ್ಟಕ್ಕೆ ಸಿಲುಕಿದ್ದ ಗ್ರಾಮೀಣ ಪ.ಪಂಗಡಗಳ ಬಡವರಿಗೆ ನೆರವು ಒದಗಿಸುವುದಕ್ಕಾಗಿ ವೆಂಕಟೇಶ್ ಬೌದ್ಧ ಅವರಿಗೆ ನೀಡಿದ ನೆರವು | ರೂ. 1,000/– |
| * ಬೆಂಗಳೂರಿನಲ್ಲಿ ಕೆಲಸ ಇಲ್ಲದೆ ಸಂಕಷ್ಟಕ್ಕೆ ಗುರಿಯಾಗಿದ್ದ ಗೃಹ ಕಾರ್ಮಿಕಳಾದ ಶ್ರೀಮತಿ ಲತಾ ವಿ. ಅವರಿಗೆ ಗೌರೀಶ/ರವಿರಾಜ್ ಮೂಲಕ ಒದಗಿಸಿದ ನೆರವು | ರೂ. 1,000/– |
| * ಬೆಂಗಳೂರು ಜಿಲ್ಲೆಯಲ್ಲಿ ವಿತರಣೆ ಮಾಡಲಾದ ಪುಸ್ತಕಗಳ ವೆಚ್ಚ (ಪ್ರಸಾರ ಮಾಡಲಾದ ಪುಸ್ತಕಗಳು (1) ನಮ್ಮ ಸಂವಿಧಾನ–ಅತಿ ಸಂಕ್ಷಿಪ್ತದಲ್ಲಿ (2) ವಿರೋಧಾಭಾಸ ಕೂಡಲೇ ಕೊನೆಯಾಗಲಿ (3) ಅರಿವಿನ ಕಡೆಗೆ ನಮ್ಮ ನಡಿಗೆ (4) ಮಾರ್ಗದರ್ಶಿ ರಾಮಮನೋಹರ ಲೋಹಿಯಾ (5) ಗಾಂಧಿ ಹತ್ಯೆಯ ಹಿನ್ನೆಲೆ) | ರೂ. 3,600/– |
| * ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬರುವ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಹತ್ವ ಪಡೆದಿರುವ ದಿನಗಳ ಮಾಹಿತಿ ಇರುವ ಕಾರ್ಡ್‌ಗಳ ವೆಚ್ಚ | ರೂ. 1,300/– |
| * 'ಯುವ ಧ್ವನಿ' ಮಾಸ ಪತ್ರಿಕೆಯ ಮೇ ಮತ್ತು ಜೂನ್ ಸಂಚಿಕೆಗಳನ್ನು ಆಸಕ್ತರಲ್ಲಿ ವಿತರಣೆ ಮಾಡಿದ ವೆಚ್ಚ | ರೂ. 400/– |
| * ಪೌರಕಾರ್ಮಿಕರ ಸಾವು ಮತ್ತು ಅಂತರಜಾತಿ ವಿವಾಹಿತರ ಮಾಹಿತಿ ಪಡೆಯುವ ಕಾರ್ಯದಲ್ಲಿ ತೊಡಗಿದ ಸುಚಿತ್ರಾ, ಮೈಸೂರು ಇವರಿಗೆ ನೀಡಲಾದ ಗೌರವ ಧನ | ರೂ. 1,000/– |
| * ಜೆರಾಕ್ಸ್ ಮತ್ತು ಲೇಖನ ಸಾಮಗ್ರಿ ವೆಚ್ಚ | ರೂ. 2,400/– |
| * ಕೊವಿಡ್ ಸಂಕಷ್ಟಕ್ಕೆ ಗುರಿಯಾದವರಿಗೆ ನೆರವು ಒದಗಿಸಲು 'ಪ್ರಜಾವಾಣಿ' ನೀಡಿದ ಪ್ರಕಟಣೆಗೆ ಸ್ಪಂದಿಸಿ ವೇದಿಕೆ ವತಿಯಿಂದ ಒದಗಿಸಿದ ನೆರವು | ರೂ. 1,500/– |
| * ಬೆಂಗಳೂರು ಜಿಲ್ಲೆ ಉಸ್ತುವಾರಿ ಮತ್ತು ಕಾರ್ಯಕ್ರಮ ಸಂಯೋಜಕರಾಗಿ ಕೆಲಸ ಮಾಡುತ್ತಿರುವ ಸುಷ್ಮಿತಾ ಬಿ.ಸಿ. ಇವರಿಗೆ ನೀಡಲಾದ ಗೌರವ ಧನ (ಮಾಸಿಕ ರೂ.2000ರಂತೆ ಆರು ತಿಂಗಳಿಗೆ) | ರೂ.12,000/– |
| | **ಒಟ್ಟು ರೂ. 30,700/–** |

**ಮಂಡ್ಯ ಜಿಲ್ಲೆ**

| | |
|---|---|
| * ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬರುವ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಹತ್ವ ಪಡೆದಿರುವ ದಿನಗಳ ಮಾಹಿತಿ ಇರುವ ಕಾರ್ಡ್‌ಗಳ ವೆಚ್ಚ | ರೂ. 1,200/– |
| * ಮಂಡ್ಯ ಜಿಲ್ಲೆಯಲ್ಲಿ ವಿತರಣೆ ಮಾಡಲಾದ ಪುಸ್ತಕಗಳ ವೆಚ್ಚ (ಪ್ರಸಾರ ಮಾಡಲಾದ ಪುಸ್ತಕಗಳು (1) ನಮ್ಮ ಸಂವಿಧಾನ–ಅತಿ ಸಂಕ್ಷಿಪ್ತದಲ್ಲಿ | ರೂ. 4,150/– |

(2) ವಿರೋಧಾಭಾಸ ಕೂಡಲೇ ಕೊನೆಯಾಗಲಿ (3) ಅರಿವಿನ ಕಡೆಗೆ ನಮ್ಮ ನಡಿಗೆ
(4) ಮಾರ್ಗದರ್ಶಿ ರಾಮಮನೋಹರ ಲೋಹಿಯಾ (5) ಗಾಂಧಿ ಹತ್ಯೆಯ ಹಿನ್ನೆಲೆ)
* 'ಯುವ ಧ್ವನಿ' ಮಾಸ ಪತ್ರಿಕೆಯ ಮೇ ಮತ್ತು ಜೂನ್ ಸಂಚಿಕೆಗಳನ್ನು ರೂ. 500/–
ಆಸಕ್ತರಲ್ಲಿ ವಿತರಣೆ ಮಾಡಿದ ವೆಚ್ಚ
* ಆರು ತಿಂಗಳ ಅವಧಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಏರ್ಪಡಿಸಲಾದ ವಿವಿಧ ರೂ. 1,450/–
ಕಾರ್ಯಕ್ರಮಗಳಿಗಾಗಿ ಭರಿಸಲಾದ ಹೆಚ್ಚುವರಿ ಖರ್ಚು
* ಜಿಲ್ಲಾ ಸಂಚಾಲಕ ಹುರುಗಲವಾಡಿ ರಾಮಯ್ಯ ಅವರಿಗೆ ನೀಡಲಾದ ಮಾಸಿಕ ಗೌರವ ಧನ
(ಮಾಸಿಕ ರೂ.2000ರಂತೆ ಆರು ತಿಂಗಳಿಗೆ) ರೂ.12,000/–
* ಮೇ ತಿಂಗಳಲ್ಲಿ ಕಾರ್ಮಿಕ ದಿನಾಚರಣೆ, ಸಂವಿಧಾನ ಕುರಿತ ಚರ್ಚೆ, ಲೋಹಿಯಾ ಜೀವನ
ಕುರಿತ ವಿಚಾರಗೋಷ್ಠಿ, ಮಕ್ಕಳಿಗೆ ಹಾಡಿನ ತರಬೇತಿ, ಚಟುಟಿಕೆಗಳನ್ನು ಸಂಘಟಿಸಿದ್ದು ರೂ. 1,050/–
* ಜೂನ್ ತಿಂಗಳಲ್ಲಿ ಎನ್.ಎಸ್.ಎಲ್. ಕಾರ್ಖಾನೆ ಮುಂದೆ ಧರಣಿ, ನಾಲವಡಿ
ಕೃಷ್ಣರಾಜ ಒಡೆಯರ್, ಶಾಹು ಮಹಾರಾಜ್ ಮತ್ತು ಕೆಂಪೇಗೌಡ ಜಯಂತಿ
ಡಾ॥ ಸಿದ್ಧಲಿಂಗಯ್ಯ ಶ್ರದ್ಧಾಂಜಲಿ ಸಭೆ ನಡೆಸಿದ್ದು ರೂ. 1,250/–

**ಒಟ್ಟು ರೂ. 21,600/–**

---

**ಹಾವೇರಿ ಜಿಲ್ಲೆ**

* ಹಾವೇರಿ ಜಿಲ್ಲೆಯಲ್ಲಿ ವಿತರಣೆ ಮಾಡಲಾದ ಪುಸ್ತಕಗಳ ವೆಚ್ಚ ರೂ. 850/–
(ಪ್ರಸಾರ ಮಾಡಲಾದ ಪುಸ್ತಕಗಳು (1) ನಮ್ಮ ಸಂವಿಧಾನ–ಅತಿ ಸಂಕ್ಷಿಪ್ತದಲ್ಲಿ
(2) ವಿರೋಧಾಭಾಸ ಕೂಡಲೇ ಕೊನೆಯಾಗಲಿ (3) ಅರಿವಿನ ಕಡೆಗೆ ನಮ್ಮ ನಡಿಗೆ
(4) ಮಾರ್ಗದರ್ಶಿ ರಾಮಮನೋಹರ ಲೋಹಿಯಾ (5) ಗಾಂಧಿ ಹತ್ಯೆಯ ಹಿನ್ನೆಲೆ)
* ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಅಂತರರಾಷ್ಟ್ರೀಯ ಮತ್ತು ರೂ. 800/–
ರಾಷ್ಟ್ರೀಯ ಮಹತ್ವ ಪಡೆದಿರುವ ದಿನಗಳ ಮಾಹಿತಿ ಇರುವ ಕಾರ್ಡ್‌ಗಳ ವೆಚ್ಚ
* 'ಯುವ ಧ್ವನಿ' ಮಾಸ ಪತ್ರಿಕೆಯ ಮೇ ಮತ್ತು ಜೂನ್ ಸಂಚಿಕೆಗಳನ್ನು ರೂ. 400/–
ಆಸಕ್ತರಲ್ಲಿ ವಿತರಣೆ ಮಾಡಿದ ವೆಚ್ಚ
* ಜಿಲ್ಲಾ ಸಂಚಾಲಕ ಎಂ. ಕರಿಬಸಪ್ಪ ಅವರಿಗೆ ನೀಡಲಾದ ಮಾಸಿಕ ಗೌರವ ಧನ
(ಮಾಸಿಕ ರೂ.2000/–ರಂತೆ ಆರು ತಿಂಗಳಿಗೆ) ರೂ. 12,000/–
* ಜಿಲ್ಲೆಯಲ್ಲಿ ಲೆಟರ್‌ಹೆಡ್ ಮುದ್ರಣ, ಪತ್ರಿಕಾ ಹೇಳಿಕೆ ಜೆರಾಕ್ಸ್, ಅಂಗನವಾಡಿ ಮಕ್ಕಳಿಗೆ ಬಿಸ್ಕತ್
ಪ್ಯಾಕೆಟ್ ಖರೀದಿ, ಕುರಿಯರ್ ಶುಲ್ಕ, ಮಾಹಿತಿ ಹಕ್ಕು ಕಾಯ್ದೆ ಅಡಿ ಅರ್ಜಿ ಶುಲ್ಕ,
ಲೋಹಿಯಾ ಜನ್ಮದಿನದ ಮಾಹಿತಿ ಪತ್ರ ಜೆರಾಕ್ಸ್ ಇತ್ಯಾದಿಗಾಗಿ ಆರು ತಿಂಗಳಲ್ಲಿ ಆಗಿರುವ ಖರ್ಚು ರೂ. 965/–

**ಒಟ್ಟು ರೂ. 15,015/–**

---

**ದಾವಣಗೆರೆ ಜಿಲ್ಲೆ**

* ದಾವಣಗೆರೆ ಜಿಲ್ಲೆಯಲ್ಲಿ ವಿತರಣೆ ಮಾಡಲಾದ ಪುಸ್ತಕಗಳ ವೆಚ್ಚ ರೂ. 750/–
(ಪ್ರಸಾರ ಮಾಡಲಾದ ಪುಸ್ತಕಗಳು (1) ನಮ್ಮ ಸಂವಿಧಾನ–ಅತಿ ಸಂಕ್ಷಿಪ್ತದಲ್ಲಿ
(2) ವಿರೋಧಾಭಾಸ ಕೂಡಲೇ ಕೊನೆಯಾಗಲಿ (3) ಅರಿವಿನ ಕಡೆಗೆ ನಮ್ಮ ನಡಿಗೆ
(4) ಮಾರ್ಗದರ್ಶಿ ರಾಮಮನೋಹರ ಲೋಹಿಯಾ (5) ಗಾಂಧಿ ಹತ್ಯೆಯ ಹಿನ್ನೆಲೆ)
* ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬರುವ ಅಂತರರಾಷ್ಟ್ರೀಯ ಮತ್ತು ರೂ. 600/–
ರಾಷ್ಟ್ರೀಯ ಮಹತ್ವ ಪಡೆದಿರುವ ದಿನಗಳ ಮಾಹಿತಿ ಇರುವ ಕಾರ್ಡ್‌ಗಳ ವೆಚ್ಚ
* 'ಯುವ ಧ್ವನಿ' ಮಾಸ ಪತ್ರಿಕೆಯ ಮೇ ಮತ್ತು ಜೂನ್ ಸಂಚಿಕೆಗಳನ್ನು ರೂ. 400/–
ಆಸಕ್ತರಲ್ಲಿ ವಿತರಣೆ ಮಾಡಿದ ವೆಚ್ಚ

**ಒಟ್ಟು ರೂ. 1,750/–**

---

**ರಾಯಚೂರು ಜಿಲ್ಲೆ**

| | |
|---|---|
| * ರಾಯಚೂರು ಜಿಲ್ಲೆಯಲ್ಲಿ ವಿತರಣೆ ಮಾಡಲಾದ ಪುಸ್ತಕಗಳ ವೆಚ್ಚ (ಪ್ರಸಾರ ಮಾಡಲಾದ ಪುಸ್ತಕಗಳು (1) ನಮ್ಮ ಸಂವಿಧಾನ–ಅತಿ ಸಂಕ್ಷಿಪ್ತದಲ್ಲಿ (2) ವಿರೋಧಾಭಾಸ ಕೂಡಲೇ ಕೊನೆಯಾಗಲಿ (3) ಅರಿವಿನ ಕಡೆಗೆ ನಮ್ಮ ನಡಿಗೆ (4) ಮಾರ್ಗದರ್ಶಿ ರಾಮಮನೋಹರ ಲೋಹಿಯಾ (5) ಗಾಂಧಿ ಹತ್ಯೆಯ ಹಿನ್ನೆಲೆ) | ರೂ. 750/– |
| * ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬರುವ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಹತ್ವ ಪಡೆದಿರುವ ದಿನಗಳ ಮಾಹಿತಿ ಇರುವ ಕಾರ್ಡ್‌ಗಳ ವೆಚ್ಚ | ರೂ. 600/– |
| * 'ಯುವ ಧ್ವನಿ' ಮಾಸ ಪತ್ರಿಕೆಯ ಮೇ ಮತ್ತು ಜೂನ್ ಸಂಚಿಕೆಗಳನ್ನು ಆಸಕ್ತರಲ್ಲಿ ವಿತರಣೆ ಮಾಡಿದ ವೆಚ್ಚ | ರೂ. 400/– |
| * ವೇದಿಕೆ ಚಟುವಟಿಕೆಗಳಲ್ಲಿ ತೊಡಗಿದ ಪದ್ಮಾ ಅವರಿಗೆ ನೀಡಲಾದ ಗೌರವ ಧನ | ರೂ.1,000/– |
| | **ಒಟ್ಟು ರೂ. 2,750/–** |

## 2021ರ ಜನವರಿಯಿಂದ ಜೂನ್‌ವರೆಗೆ ಸಂಗ್ರಹವಾಗಿರುವ ಧನಸಹಾಯ

| | | |
|---|---|---|
| 1. ಉಮಾಶಂಕರ್ | ಮಾರ್ಚ್, ಏಪ್ರಿಲ್, ಮೇ, ಮಾಸಿಕ ರೂ. 500/–ರಂತೆ | ರೂ. 1,500/– |
| 2. ಗಜೇಂದ್ರ | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ. 1000/–ರಂತೆ | ರೂ. 6,000/– |
| 3. ಶಾರದಾ | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ.1000/–ರಂತೆ | ರೂ. 6,000/– |
| 4. ಅನಂತ್ | ಜನವರಿಯಿಂದ ಜೂನ್‌ವರೆಗೆ ನೀಡಿದ ಧನಸಹಾಯ | ರೂ. 14,000/– |
| 5. ಎಚ್‌ವಿ ಮಂಜುನಾಥ್ | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ.500/–ರಂತೆ | ರೂ. 3,000/– |
| 6. ಡಾ॥ ವಿಜಯಾ | ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ತಲಾ ರೂ.500/–ರಂತೆ | ರೂ. 1.500/– |
| 7. ಪುಷ್ಪಾ | ಮೇ, ಜೂನ್ ತಿಂಗಳಲ್ಲಿ ತಲಾ ರೂ.500/–ರಂತೆ | ರೂ. 1,000/– |
| 8. ಮಂಗ್ಳೂರ ವಿಜಯ | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ.1000/–ರಂತೆ | ರೂ. 6,000/– |
| 9. ಸುಷ್ಮಿತಾ | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ.500/–ರಂತೆ | ರೂ. 3,000/– |
| 10. ಅನುಪಮಾ ವಿ.ಎಸ್. | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ.500/–ರಂತೆ | ರೂ. 3,000/– |
| 11. ರಾಮಮನೋಹರ | ಮೇ, ಜೂನ್ | ರೂ.25,000/– |
| 12. ಸುಪ್ರೀತಾ | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ.200/–ರಂತೆ | ರೂ. 1,200/– |
| 13. ಅಪೂರ್ವಾ ವಿ.ಎಸ್. | ಜನವರಿಯಿಂದ ಜೂನ್‌ವರೆಗೆ ಮಾಸಿಕ ರೂ.1000/–ರಂತೆ | ರೂ. 6,000/– |
| 14. ಪ್ರೊ॥ ಹನುಮಂತ | ಜೂನ್ | ರೂ. 5,000/– |
| 15. ಜೂನ್ 10–13 ರಂದು ನಡೆಸಿದ 'ಬನ್ನಿ, ಸಂವಿಧಾನವನ್ನು ಅರ್ಥಮಾಡಿಕೊಳ್ಳೋಣ' ಕ್ಲಾಸ್‌ಗೆ ನೋಂದಣಿ ಮಾಡಿಕೊಂಡ ಇಬ್ಬರು ನೀಡಿದ ಶುಲ್ಕ (ತಲಾ ರೂ.400/–ರಂತೆ) | | ರೂ. 800/– |
| | | ರೂ. 83,000/– |
| | ಹಿಂದಿನ ವರ್ಷದ ಉಳಿಕೆ | ರೂ. 9,045/– |
| | ಸ್ವೀಕೃತವಾದ ಒಟ್ಟು ಮೊತ್ತ | ರೂ. 92,045/– |
| | ಒಟ್ಟು ವೆಚ್ಚ | ರೂ. 71,815/– |
| | ಉಳಿಕೆ | ರೂ. 19,430/– |

**ಪ್ರಧಾನ ಸಮನ್ವಯಕಾರರು: ಮಂಗ್ಳೂರ ವಿಜಯ ಮೊಬೈಲ್ 94491–02294** Email: vijaymanglura@gmail.com